ಸಂಪುಟ 01 | ಸಂಚಿಕೆ 146 | ಶನಿವಾರ 18 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಪರಂಪರೆಯ ದಿನ

ಮಾನವ ಪರಂಪರೆಯನ್ನು ಸಂರಕ್ಷಿಸಲು ಮತ್ತು ಈ ಕ್ಷೇತ್ರದಲ್ಲಿನ ಎಲ್ಲಾ ಸಂಬಂಧಿತ ಸಂಸ್ಥೆಗಳ ಪ್ರಯತ್ನಗಳನ್ನು ಗುರುತಿಸಲು ಪ್ರತಿ ವರ್ಷ ಏಪ್ರಿಲ್ 18 ರಂದು ಈ ದಿನವನ್ನು ಆಚರಿಸಲಾಗುತ್ತದೆ. ಈ ದಿನವನ್ನು 1982 ರಲ್ಲಿ ಅಂತರರಾಷ್ಟ್ರೀಯ ಸ್ಮಾರಕಗಳು ಮತ್ತು ತಾಣಗಳ ಮಂಡಳಿ (ಖಅಔಒಔಖ) ಘೋಷಿಸಿತು ಮತ್ತು 1983 ರಲ್ಲಿ ಯುನೆಸ್ಕೋದ ಸಾಮಾನ್ಯ ಸಭೆಯಿಂದ ಅನುಮೋದಿಸಲಾಯಿತು


## ಸುಭಾಷಿತ

ವಿದ್ಯೆಯೊಂದಿಗೆ ಆದರ್ಶ ಗುಣಗಳು
ನಿನ್ನಲ್ಲಿ ಬಾರದಿದ್ದರೆ ನೀನು
ಓದುವುದು ವ್ಯರ್ಥ.

–ಪ್ರೇಮ್‌ಚಂದ್

## ರಾಯರಿಗೆ ಗಂಧ ಲೇಪನ ಅಲಂಕಾರ ಮತ್ತು ಶ್ರೀ ಮೈಸೂರು ರಾಮಚಂದ್ರಾಚಾರ್ಯರಿಂದ ದಾಸವಾಣಿ

ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ತ್ಯಾಗರಾಜನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅಕ್ಷಯ ತೃತೀಯ ಪ್ರಯುಕ್ತ ಏಪ್ರಿಲ್ 20, ಶುಕ್ರವಾರ ಬೆಳಗ್ಗೆ 9ಕ್ಕೆ ರಾಯರ ಬೃಂದಾವನಕ್ಕೆ ಹಾಗೂ ಇನ್ನಿತರ ಪರಿವಾರ ದೇವರುಗಳಿಗೆ ಗಂಧ ಲೇಪನ ಅಲಂಕಾರ. ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ವಾನ್ ಶ್ರೀ ಮೈಸೂರು ರಾಮಚಂದ್ರಾಚಾರ್ ಮತ್ತು ಸಂಗಡಿಗರಿಂದ ದಾಸವಾಣಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಅಡ್ಡರಸ್ತೆ, ತ್ಯಾಗರಾಜನಗರ, ಬೆಂಗಳೂರು–560028

# ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ನಾರಿ ಶಕ್ತಿ ಬಿಲ್ ವಿಧೇಯಕಕ್ಕೆ ಸೋಲು

**ನವದೆಹಲಿ: ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಮಂಡಿಸಲಾದ ಮಹಿಳಾ ಮೀಸಲಾತಿ ವಿಧೇಯಕವು ಲೋಕಸಭೆಯಲ್ಲಿ ಅಗತ್ಯ ಸಂಖ್ಯಾಬಲ ಪಡೆಯದೆ ಸೋಲನುಭವಿಸಿದೆ.**

ಬಹು ನಿರೀಕ್ಷೆ ಮೂಡಿಸಿದ್ದ ಈ ವಿಧೇಯಕದ ಕುರಿತ ಚರ್ಚೆ ವೇಳೆ ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವೆ ತೀವ್ರ ವಾಗ್ವಾದ ನಡೆದಿತ್ತು. ಮತದಾನದ ವೇಳೆ ಒಟ್ಟು 520 ಸದಸ್ಯರು ಪಾಲ್ಗೊಂಡಿದ್ದು, ಮಸೂದೆ ಅಂಗೀಕಾರಕ್ಕೆ ಅಗತ್ಯವಾಗಿದ್ದ 326 ಮತಗಳು ದೊರೆಯಲಿಲ್ಲ. 'ನಾರಿ ಶಕ್ತಿ ಬಿಲ್' ಪರವಾಗಿ 298 ಸದಸ್ಯರು ಮತ ಚಲಾಯಿಸಿದರೆ, ವಿರುದ್ಧವಾಗಿ 230 ಸದಸ್ಯರು ಮತ ಹಾಕಿದರು. ಸಂವಿಧಾನ ತಿದ್ದುಪಡಿ ವಿಧೇಯಕವಾಗಿರುವ ಕಾರಣ ಅಗತ್ಯವಾದ ಮೂರುನಲ್ಲಿ ಎರಡು ಭಾಗದ ಬಹುಮತ ಸಾಬೀತುಪಡಿಸಲು



ಸಾಧ್ಯವಾಗದೆ ಮಸೂದೆ ಸೋಲಾಯಿತು.

ವಿಧೇಯಕದ ಉದ್ದೇಶ ಮಹಿಳೆಯ–ರಿಗೆ ಸಂಸತ್ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಶೇಕಡಾ 33ರಷ್ಟು ಸ್ಥಾನಗಳನ್ನು ಮೀಸಲಿಡುವ ಮೂಲಕ ರಾಜಕೀಯದಲ್ಲಿ ಮಹಿಳಾ ಸಬಲೀಕರಣ ಸಾಧಿಸುವುದು ವಿಧೇಯಕದ ಮುಖ್ಯ ಗು–ರಿಯಾಗಿತ್ತು. ಹಲವು ವರ್ಷಗಳಿಂದ ಮಹಿಳಾ ಸಂಘಟನೆಗಳು ಹಾಗೂ ಸಾಮಾಜಿಕ ಚಳವಳಿಗಳು ಈ ಬೇಡಿಕೆಯನ್ನು ಮುಂದಿಟ್ಟಿದ್ದವು. ವಿರೋಧದ ಪ್ರಮುಖ ಕಾರಣಗಳು ಕೆಲ ರಾಜಕೀಯ ಪಕ್ಷಗಳು ವಿಧೇಯಕಕ್ಕೆ ಬೆಂಬಲ ಸೂಚಿಸಿದರೂ ಕೆಳಗಿನ ವಿಚಾರಗಳು ವಿವಾದಕ್ಕೆ ಕಾರಣವಾದವು: ಕ್ಷೇತ್ರ ಮರುಹೊಂದಿಕೆ (Delim-itation) ಕುರಿತ ಭಿನ್ನಾಭಿಪ್ರಾಯ ಹಿಂದುಳಿದ ವರ್ಗಗಳಿಗೆ ಉಪಮೀಸಲಾತಿ ಬೇಡಿಕೆ ವಿಧೇಯಕ ಜಾ–ರಿಗೆ ಸಮಯಾವಕಾಶದ ಬಗ್ಗೆ ಅನುಮಾನ ಇವುಗಳಿಂದ ಸದನದಲ್ಲಿ ಏಕಾಭಿಪ್ರಾಯ ನಿರ್ಮಾಣವಾಗಲಿಲ್ಲ. ಸದನದಲ್ಲಿ ತೀವ್ರ ಚರ್ಚೆ ಸದನದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ತೀವ್ರ ಚರ್ಚೆ ಹಾಗೂ ವಾಗ್ವಾದ ನಡೆಯಿತು. ಮಹಿಳಾ ಪ್ರತಿನಿಧಿತ್ವ ಹೆಚ್ಚಿಸುವ ಅಗತ್ಯವನ್ನು ಹಲವರು ಒತ್ತಿಹೇಳಿದರೆ, ಕೆಲವು ಸದಸ್ಯರು ವಿಧಾನಾತ್ಮಕ ಹಾಗೂ ರಾಜ–ಕೀಯ ಆಕ್ಷೇಪಣೆಗಳನ್ನು ಮುಂದಿಟ್ಟರು.

ರಾಜಕೀಯ ಮತ್ತು ಸಾಮಾಜಿ–ಕ ಪ್ರತಿಕ್ರಿಯೆ ವಿಧೇಯಕ ಅಂಗೀಕಾರವಾಗದ ಹಿನ್ನೆಲೆಯಲ್ಲಿ ಮಹಿಳಾ ಸಂಘಟನೆಗಳು ತೀವ್ರ ನಿರಾಸೆ ವ್ಯಕ್ತಪಡಿಸಿವೆ. ಈ ಬೆಳವಣಿಗೆ ಕೇಂದ್ರದ ಭಾರತೀಯ ಜನತಾ ಪಾರ್ಟಿ ನೇತೃತ್ವದ ಸರ್ಕಾರಕ್ಕೆ ರಾಜಕೀಯವಾಗಿ ದೊಡ್ಡ ಮುಖಭಂಗ.

# ಪಕ್ಷಿಗಳಿಗೆ ನೀರಿನ ಅರವಟ್ಟಿಗೆ ಅನುಕೂಲ



ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಬೇಸಿಗೆ ಸಮೀಪಿಸುತ್ತಿದ್ದಂತೇ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತದೆ. ಆದರೆ ಈ ಸಮಸ್ಯೆ ಕೇವಲ ಮನುಷ್ಯರು ಮಾತ್ರವಲ್ಲದೇ ಪ್ರಾಣಿಗಳೂ ಎದುರಿಸುತ್ತವೆ. **ಅದರಲ್ಲೂ ವನ್ಯಜೀವಿಗಳು ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿಂದ ಬಳಲುತ್ತವೆ.**

ಈ ಹಿನ್ನೆಲೆಯಲ್ಲಿ ಬಸವ ಚೇತನ ಗ್ರಾಮೀಣಾಭಿವೃದ್ಧಿ ಸಂಘದ ವತಿಯಿಂದ ವನ್ಯಜೀವಿಗಳಿಗೆ ಕುಡಿಯವ ನೀರಿನ ವ್ಯವಸ್ಥೆ ಮಾಡಿದ್ದು, ತನ್ನ ವ್ಯಾಪ್ತಿಯಲ್ಲಿ ಬರುವ ಅನೇಕ ಕಡೆ ಹೊಲಗಳನ್ನು ಗುರುತಿಸಿ ಅರವಟ್ಟಿಗೆ ಕಾರ್ಯ ಆರಂಭಿಸಿದೆ. ಈ ಸಂಘದ ಕಾರ್ಯ ಜನರ ಮೆಚ್ಚುಗೆಗೆ ಪಾತ್ರವಾಗಿದೆ ಬೇಸಿಗೆಯ ಬಿಸಿಲಿನಿಂದಾಗಿ ಪಕ್ಷಿಗಳು ನೀರಿಗಾಗಿ ಪರಿತಪಿಸುತ್ತಿದು. ಅವುಗಳ ರಕ್ಷಣೆಗಾಗಿ ಸಾರ್ವಜನಿಕರು ಮನೆಗಳ ಮೇಲೆ ಗಿಡಮರಗಳ ಅಡಿಯಲ್ಲಿ ನೀರಿನ ಅರವಟ್ಟಿಗೆ ಅಥವಾ ಪಾತ್ರೆಗಳನ್ನು ಇಟ್ಟು ನೀರುಡಿಸುವಂತೆ ಜಾಗೃತಿ ಮೂಡಿಸಲಾಗಿದೆ ಮೂಕ ಪ್ರಾಣಿ ಪಕ್ಷಿಗಳು ದಾಹ ತಣಿಸಲು ಈ ಮಾನವೀಯ ಕಾರ್ಯವು ಮುಖ್ಯವಾಗಿದೆ ಎಂದು ಶ್ರೀ ಬಸವಚೇತನ ಗ್ರಾಮೀಣ ಅಭಿವೃದ್ಧಿ ಸಂಘವು ಶ್ರೀ ಬಸವ ಗೋಶಾಲೆ ಗೋ ರಕ್ಷಾ ಕೇಂದ್ರ ಈ ಕಾರ್ಯ ಹಮ್ಮಿಕೊಂಡಿದೆ.

ಈ ಸಂದರ್ಭದಲ್ಲಿ ಸಂಘದ ಸಂಗಮೇಶ ಎಸ್.ಹರನಾಳ, ಕಾರ್ಯದರ್ಶಿ ಗುರುರಾಜ ಕಾಜಗಾರ, ಪದಾಧಿಕಾ–ರಿಗಳಾದ ಗೌಡಪ್ಪಗೌಡ ಬಿರಾದಾರ, ಮುತ್ತು ವಡ್ಡೋಡಗಿ, ಕುಮಾರ್ ಹರನಾಳ, ವಿಜಯಕುಮಾರ ಸಾಸನೂರ, ರಮೇಶ ಹರವಾಳ ಹಾಗೂ ಸಂಗಡಿಗರು ಇದ್ದರು.

## ಹಟ್ಟಿ, ಮಾವಿನಭಾವಿ, ನಾಗರಹಾಳ,ಆನೆಹೊಸೂರನ್ನು ಹೋಬಳಿ ಕೇಂದ್ರ ಮಾಡುವಂತೆ ಎಂ ಎಲ್ ಸಿಬಯ್ಯಪುರ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ನನ್ನ ಮತಕ್ಷೇತ್ರ ವ್ಯಾಪ್ತಿಯ ಲಿಂಗಸಗೂರು ತಾಲೂಕಿನ ಹಟ್ಟಿ, ಮಾವಿನಭಾವಿ, ನಾಗರಹಾಳ, ಆನೆಹೊಸೂರನ್ನು ಹೋಬಳಿ ಕೇಂದ್ರಗಳನ್ನಾಗಿ ಮಾಡುವಂತೆ ಎಂ ಎಲ್ ಸಿ ಶರಣುಗೌಡ ಬಯ್ಯಾಪುರ ಕಂದಾಯ ಸಚಿವ ಕೃಷ್ಣ ಬೈರೇಗೌಡರವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.**



ಹಟ್ಟಿ ಪಟ್ಟಣವು ಸುಮಾರು 40 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು, ಸುತ್ತಮುತ್ತಲಿನ ಸುಮಾರು 10–15 ಹಳ್ಳಿಯ ರೈತರು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗಾಗಿ ಹಟ್ಟಿಯಿಂದ 10 ಕಿ.ಮೀ. ದೂರವಿರುವ ಹೋಬಳಿ ಕೇಂದ್ರ ಗುರುಗುಂಟಾಕ್ಕೆ ಹೋಗಿಬರಬೇಕಾಗುತ್ತದೆ. ಇದರಿಂದ ರೈತರಿಗೆ ಬಹಳ ಸಮಸ್ಯೆ ಯಾಗಿರುತ್ತದೆ. ಪ್ರಸ್ತುತ ಲಿಂಗಸಗೂರು ತಾಲೂಕಿನಲ್ಲಿ ಕೇವಲ ಮೂರು ಹೋಬಳಿ ಕೇಂದ್ರಗಳಿದ್ದು, ಈಗಿನ ಜನಸಂಖ್ಯೆಗೆ ಅನುಗುಣವಾಗಿ ತಾಲೂಕಿನಲ್ಲಿ ಹೊಸದಾಗಿ ಹಟ್ಟಿ, ನಾಗರಹಾಳ ಮತ್ತು ಮಾವಿನ ಭಾವಿಗಳನ್ನು ಹೋಬಳಿ ಕೇಂದ್ರಗಳನ್ನಾಗಿ ಮಾಡುವುದು ಅತ್ಯವಶ್ಯವಿರುತ್ತದೆ.


ಇದು ರೈತರ ಬಹುದಿನಗಳ ಬೇಡಿಕೆ ಯಾಗಿರುವುದರಿಂದ ಲಿಂಗಸಗೂರು ತಾಲೂಕಿನ ಹಟ್ಟಿ, ನಾಗರಹಾಳ ಮತ್ತು ಮಾವಿನಭಾವಿ, ಆನೆಹೊಸೂರುಗಳನ್ನು ಹೋಬಳಿ ಕೇಂದ್ರಗಳನ್ನಾಗಿ ಮಾಡಬೇಕೆಂದು ಮನವಿ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

## ಸಿರವಾರದ ಜನಮನದ ನಾಯಕ ಕೃಷ್ಣನಾಯಕ ಕುಟುಂಬದ ದುರ್ಘಟನೆಗೆ ಕಂಬನಿ ಸಮಾಜಸೇವೆಯ ದೀಪ ನಂದಿತು: ಸಿರವಾರಕ್ಕೆ ಅಪೂರಣೀಯ ನಷ್ಟ

ನೈಜ್ಯ ದೆಸೆ ನ್ಯೂಸ್

**ಸಿರವಾರ: ಸರಳತೆ, ಸಜ್ಜನಿಕೆ ಹಾಗೂ ಜನಸೇವೆ ಎಂಬ ಮೂರು ಮೌಲ್ಯಗಳನ್ನು ಜೀವನದ ಧ್ಯೇಯವಾಗಿಸಿಕೊಂಡಿದ್ದ ಸಮಾಜಮುಖಿ ವ್ಯಕ್ತಿತ್ವ ಕೃಷ್ಣನಾಯಕ ಅವರ ಅಗಲಿಕೆಯ ಸುದ್ದಿ ಸಿರವಾರ ಪಟ್ಟಣದ ಜನರನ್ನು ಶೋಕ ಸಾಗರದಲ್ಲಿ ಮುಳುಗಿಸಿದೆ.**

ಸುರಪುರ ತಾಲೂಕಿನ ಶಾಂತಪುರ ಸಮೀಪ ಸಂಭವಿಸಿದ ಕಾರು ಹಾಗೂ ವಿ .ಆರ್.ಎಲ್ ಬಸ್ ಭೀಕರ ರಸ್ತೆ ಅಪಘಾತದಲ್ಲಿ ಕೃಷ್ಣನಾಯಕ, ಅವರ ಧರ್ಮಪತ್ನಿ, ಮಗಳು, ಅಳಿಯ, ಸೊಸೆ ಹಾಗೂ ಮೊಮ್ಮಕ್ಕಳು ದುರ್ಮರಣ ಹೊಂದಿರುವುದು ಅತೀವ ದುಃಖಕರ ಸಂಗತಿಯಾಗಿದೆ. ಸಿರವಾರ ಪಟ್ಟಣದ ಸ್ವಚ್ಛತೆ ಮತ್ತು ಅಭಿವೃದ್ಧಿಗಾಗಿ ಸದಾ ಮುಂಚೂಣಿಯಲ್ಲಿ ನಿಂತಿದ್ದ ಅವರು "ಸ್ವಚ್ಛ ಸಿರವಾರ" ಕನಸನ್ನು ಸಾಕಾರಗೊಳಿಸಲು ಜನರಲ್ಲಿ ನಿರಂತರ ಜಾಗೃತಿ ಮೂಡಿಸುತ್ತಿದ್ದರು.



ಪ್ರತಿದಿನ ಬೆಳಗಿನ ಜಾವವೇ ಎದ್ದು ಒಂದು ಗಂಟೆ ಕಾಲ ಪಟ್ಟಣ ಸ್ವಚ್ಛತೆಗೆ ತೊಡಗಿಸಿಕೊಳ್ಳುತ್ತಿದ್ದ ಅವರ ಸೇವಾ ಮನೋಭಾವ ಎಲ್ಲರಿಗೂ ಸ್ಫೂರ್ತಿದಾಯಕವಾಗಿತ್ತು. ಜನರೊಂದಿಗೆ ಆತ್ಮೀಯವಾಗಿ ಬೆರೆತು, ಸಮಸ್ಯೆಗಳಿಗೆ ಸ್ಪಂದಿಸಿ, ಸಮಾಜದ ಒಳಿತಿಗಾಗಿ ಸದಾ ಶ್ರಮಿಸುತ್ತಿದ್ದ ಕೃಷ್ಣನಾಯಕ ಅವರು ಸಿರವಾರ ಜನರ ಮನಸ್ಸಿನಲ್ಲಿ ಅಳಿಸಲಾಗದ ಗುರುತು ಮೂಡಿಸಿದ್ದಾರೆ. ಅವರ



ಅಗಲಿಕೆ ಸಿರವಾರ ತಾಲೂಕಿಗೆ ತುಂಬಲಾರದ ನಷ್ಟವಾಗಿದ್ದು, ಸಮಾಜಸೇವೆಯೊಂದು ದೊಡ್ಡ ಶೂನ್ಯವನ್ನು ಬಿಟ್ಟು ಹೋಗಿದೆ. ಅವರ ಅಗಲಿಕೆಯ ನೋವು ಕುಟುಂಬ ವರ್ಗದವರಿಗೆ, ಆಪ್ತ ಬಂಧುಗಳಿಗೆ ಹಾಗೂ ಸಿರವಾರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನತೆಗೆ ಅಸಹನೀಯವಾಗಿದೆ. ಈ ದುಃಖವನ್ನು ತಡೆದುಕೊಳ್ಳುವ ಶಕ್ತಿ ಭಗವಂತನು ಎಲ್ಲರಿಗೂ ನೀಡಲಿ ಎಂದು ಸಾರ್ವಜನಿಕರು ಕಂಬನಿ ಮಿಡಿದಿದ್ದಾರೆ.

# ಮಕ್ಕಳ ಮಾನಸಿಕ ಆರೋಗ್ಯಕ್ಕೆ ಆದ್ಯತೆ ಅಗತ್ಯ: ಫಾದರ್ ಜಾನ್ ಪೌಲ್

## ಕಲಾತ್ಮಕ ಆಟ ಮತ್ತು ವೃತ್ತಿಪರ ಚಿಕಿತ್ಸೆಗಳ ಕಾರ್ಯಾಗಾರ ಉದ್ಘಾಟನೆ ಭಾವನೆಗಳನ್ನು ಅರ್ಥೈಸಿಕೊಳ್ಳುವ ಸಂಸ್ಕೃತಿ ಬೆಳೆಸುವ ಕರೆ

ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಇಂದಿನ ವೇಗದ ಜೀವನಶೈಲಿಯಲ್ಲಿ ಮಕ್ಕಳ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದ್ದು, ಪ್ರತಿಯೊಬ್ಬರೂ ತಮ್ಮ ಹಾಗೂ ಇತರರ ಮಾನಸಿಕ ಭಾವನೆಗಳನ್ನು ಅರ್ಥೈಸಿಕೊಳ್ಳಬೇಕು ಎಂದು ಡಾನ್ ಬಾಸ್ಕೋ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕ ಫಾದರ್ ಜಾನ್ ಪೌಲ್ ಹೇಳಿದರು.**

ಪಟ್ಟಣದಲ್ಲಿ ಬ್ರೆಂಡ್ಸ್ ಸಂಸ್ಥೆ ಬೆಂಗಳೂರು, ಡಾನ್ ಬಾಸ್ಕೋ ಸಮಾಜ ಸೇವಾ ಸಂಸ್ಥೆ ದೇವದುರ್ಗ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಪೋಷಣೆ ಅಭಿವೃದ್ಧಿ ಮತ್ತು ಬೆಂಬಲಕ್ಕಾಗಿ ಮಾನಸಿಕ ಆರೋಗ್ಯ ಉಪಕ್ರಮ ಯೋಜನೆಯಡಿ ಆಯೋಜಿಸಿದ ಕಲಾತ್ಮಕ ಆಟ ಮತ್ತು ವೃತ್ತಿಪರ ಚಿಕಿತ್ಸೆಗಳ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಲ್ಲಿ ಮಾನಸಿಕ ಸದೃಢತೆ, ಆತ್ಮವಿಶ್ವಾಸ ಹಾಗೂ



ಏಕಾಗ್ರತೆ ಬೆಳೆಸುವುದು ಶಿಕ್ಷಕರು, ಪೋಷಕರು ಮತ್ತು ಸಮಾಜದ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಮನಸ್ಸು ಮತ್ತು ಮೆದುಳಿನ ಸಮತೋಲನ ಕಾಪಾಡಿಕೊಳ್ಳಲು ಆರೋಗ್ಯಕರ ಜೀವನಶೈಲಿ ಅಗತ್ಯವಿದೆ ಎಂದರು. ನಿದ್ರೆ ಪೌಷ್ಟಿಕ ಆಹಾರ ಸೇವನೆ, ಸಮರ್ಪಕ ನಿದ್ರೆ ಹಾಗೂ ಪರಸ್ಪರ ಭಾವನೆಗಳಿಗೆ ಗೌರವ ನೀಡುವುದು ಉತ್ತಮ ಮಾನಸಿಕ ಆರೋಗ್ಯದ ಮೂಲ ಅಂಶಗಳಾಗಿವೆ ಎಂದು ಹೇಳಿದರು.

ಸಿದ್ದಲಿಂಗಪ್ಪ ಕಾಕರಗಲ್ ಮಾತನಾಡಿ, ದೇವದುರ್ಗ ತಾಲೂಕಿನಲ್ಲಿ 50 ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಈಗಾಗಲೇ ಆರು ಅಧಿವೇಶನಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಬೇಸಿಗೆ ಅವಧಿಯಲ್ಲಿಯೂ ಮಕ್ಕಳ ಸಾಮರ್ಥ್ಯ ಅಭಿವೃದ್ಧಿಗಾಗಿ ಕಾರ್ಯಗಾರಗಳನ್ನು ಮುಂದುವರಿಸಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸುಮಿತ್ರ ಮಾನಸಗಲ್, ಕು. ರೇಣುಕಾ ಗೋಪಾಳಾಪುರ, ಆಪ್ತ ಸಮಾಲೋಚಕ ಶ್ರೀಮಂತ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳಾದ ಕು. ತನುಶ್ರೀ ಮತ್ತು ಕು. ಶಿವಗಂಗಮ್ಮ ಉಪಸ್ಥಿತರಿದ್ದರು. ಕು. ಮಧು ಪ್ರಾರ್ಥನೆ ಸಲ್ಲಿಸಿದರು. ಶ್ರೀಮಂತ ಸ್ವಾಗತಿಸಿ, ಭಗವಂತರಾಯ ತೆಗ್ಗಿಹಾಳ ವಂದಿಸಿದರು.

## ಸಾಹಿತ್ಯ ಸಿಂಚನ

ಜೀವನವೆಂಬುದು ಒಂದು ಪಯಣ,
ಸಂತೋಷ–ದುಃಖಗಳ ಸಂಗಮ ಕ್ಷಣ.
ಬಂದದ್ದನ್ನು ಸ್ವೀಕರಿಸಬೇಕು,
ಹೋದದ್ದನ್ನು ಬಿಡಲು ಕಲಿಯಬೇಕು.

ಕಾಲವೆಂಬ ಗುರು ಕಲಿಸುತ್ತಾನೆ,
ಸೋಲಿನಲ್ಲೂ ಬಲ ತುಂಬಿಸುತ್ತಾನೆ.
ನಿನ್ನೆಗಿನ ನೋವು ಪಾಠವಾಗಲಿ,
ನಾಳೆಯ ಕನಸು ಬೆಳಕಾಗಲಿ.

ಅಹಂಕಾರದಿಂದ ಏನೂ ಸಿಗದು,
ಪ್ರೀತಿ ಹಂಚಿದರೆ ಜೀವನ ಸುಗಮವು.
ಮಾನವತೆ ಎಂಬ ದಾರಿ ಹಿಡಿದರೆ,
ಮನದೊಳಗೆ ಶಾಂತಿ ನೆಲಸುತ್ತದೆ.

ಕೈಯಲ್ಲಿರುವ ಕ್ಷಣವೇ ನಿಜ,
ಬಾಳಿನ ಅರ್ಥ ಇದೇ ಸಜ್ಜ.
ಒಳ್ಳೆಯತನವೇ ಶಾಶ್ವತ ಗುರುತು,
ಅದೇ ಜೀವನದ ಸತ್ಯ ತತ್ವ.

ರವಿಕುಮಾರ್

# ಶ್ರೀ ಚೌಡೇಶ್ವರಿ ದೇವಿಯ 39ನೇ ವರ್ಷದ ಜಾತ್ರಾ ಮಹೋತ್ಸವ ಏ 19ರಿಂದ ಮೂರು ದಿನಗಳ ಭಕ್ತಿ ವೈಭವ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತೊಗಟವೀರ ಕ್ಷತ್ರಿಯ ಸಮಾಜದ ವತಿಯಿಂದ ಶ್ರೀ ಚೌಡೇಶ್ವರಿ ದೇವಿಯ 39ನೇ ವಾರ್ಷಿಕ ಜಾತ್ರಾ ಮಹೋತ್ಸವವು ಏಪ್ರಿಲ್ 19ರಿಂದ 21ರವರೆಗೆ ಅದ್ದೂರಿಯಾಗಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಿ.ರಾಮದಾಸ ತಿಳಿಸಿದ್ದಾರೆ.**



ಏಪ್ರಿಲ್ 19ರಂದು ಬೆಳಿಗ್ಗೆ 6 ಗಂಟೆಗೆ ಚೌಡೇಶ್ವರಿ ದೇವಸ್ಥಾನದಿಂದ ವಾದ್ಯ–ವೈಭವ, ಭಜನೆ, ಕುಂಭ–ಕಳಸ ಹಾಗೂ ನಂದಿಕೋಲ ಸೇವೆಗಳೊಂದಿಗೆ ದೇವಿಯ ಪಲ್ಲಕ್ಕಿ ಉತ್ಸವ ಜಡೆ ಬಸವೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಲಾಗುತ್ತದೆ. ಬಳಿಕ ತುಂಗಭದ್ರ ನದಿಯಿಂದ ತರಲಾದ ಪವಿತ್ರ ಜಲದಿಂದ ದೇವಿಗೆ ಅಭಿಷೇಕ ಹಾಗೂ ವಿಶೇಷ ಪೂಜೆ ನೆರವೇರಿಸಲಾಗುವುದು. ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ವಿತರಣೆ ನಡೆಯಲಿದೆ. ಸಂಜೆ 4 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ 6.30ಕ್ಕೆ ಸಹಸ್ರ ದೀಪೋತ್ಸವ ಜರುಗಲಿದೆ. ಏಪ್ರಿಲ್ 20ರಂದು ಬೆಳಿಗ್ಗೆ 6 ಗಂಟೆಗೆ ಶ್ರೀ ವೇ. ಸಿದ್ದಯ್ಯಸ್ವಾಮಿಗಳು ಜೀಕಲಪರ್ವಿ ಅವ–ರಿಂದ ಸಹಸ್ರ ಕುಂಕುಮಾರ್ಚನೆ ನಡೆಯಲಿದೆ.

ಸಂಜೆ 4 ಗಂಟೆಯಿಂದ ಭಕ್ತರು ಸೇರಿ ವಾದ್ಯ–ವೈಭವಗಳೊಂದಿಗೆ ಪಲ್ಲಕ್ಕಿ ಉತ್ಸವವು ಪಟ್ಟಣದ ಪ್ರವಾಸಿ ಮಂದಿರದ ಶ್ರೀ ಮಹಾಲಕ್ಷ್ಮೀ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಮರಳಲಿದೆ. ರಾತ್ರಿ 8 ಗಂಟೆಗೆ ಲಘು ರಥ–ೋತ್ಸವವು ಪ.ಪೂ. ಶ್ರೀ ಶ್ರೀ ಷ.ಬ್ರ. ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಅಮೃತ ಹಸ್ತದಿಂದ ನೆರವೇರಲಿದೆ. ಏಪ್ರಿಲ್ 21ರಂದು ಮುಂಜಾನೆ 3:44ಕ್ಕೆ ಧನಸ್ಸು ಲಗ್ನದಲ್ಲಿ 31ನೇ ವರ್ಷದ ಜ್ಯೋತಿಗಳ ಉತ್ಸವವು ಭಜನೆ ಹಾಗೂ ಧಾರ್ಮಿಕ ವೈಭವದೊಂದಿಗೆ ನಡೆಯಲಿದೆ.

ಜಾತ್ರಾ ಪ್ರಯುಕ್ತ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾಗುವಂತೆ ಸಮಿತಿ ಮನವಿ ಮಾಡಿದೆ. ಇದೇ ವೇಳೆ ನಿರ್ಮಾಣ ಹಂತದಲ್ಲಿರುವ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದ ಶಿಲಾ ಕಟ್ಟಡ ನಿರ್ಮಾಣಕ್ಕಾಗಿ ಸುಮಾರು 1.5 ಕೋಟಿ ರೂ. ದೇಣಿಗೆ ಸಂಗ್ರಹ ಗುರಿ ಹೊಂದಿದ್ದು, ಭಕ್ತರು ಸಹಕಾರ ನೀಡುವಂತೆ ತೊಗಟವೀರ ಕ್ಷತ್ರಿಯ ಸಂಘ, ಯುವಕ ಸಂಘ ಹಾಗೂ ಶ್ರೀ ಚೌಡೇಶ್ವರಿ ಮಹಿಳಾ ಮಂಡಳಿ ಸದಸ್ಯರು ಕೋರಿದ್ದಾರೆ.

## ಪ್ರಧಾನಿ ಮೋದಿಗೆ ಕರೆ ಮಾಡಿದ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್: ಮಹತ್ವದ ಮಾತುಕತೆ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಪಶ್ಚಿಮ ಏಷ್ಯಾದ ಸಂಘರ್ಷ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿರುವ ಸಂದರ್ಭದಲ್ಲೇ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರವಾಣಿ ಕರೆ ಮಾಡಿ ಮಹತ್ವದ ಮಾತುಕತೆ ನಡೆಸಿದ್ದಾರೆ. ಮಾತುಕತೆ ಸಂದರ್ಭದಲ್ಲಿ ಅವರು ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟು ಹಾಗೂ ಹಾರ್ಮುಜ್ ಜಲಸಂಧಿಯ ಭದ್ರತೆ ಬಗ್ಗೆ ಚರ್ಚಿಸಿದ್ದಾರೆ ಎಂದು ವರದಿಯಾಗಿದೆ.**



ಮ್ಯಾಕ್ರನ್ ಅವರೊಂದಿಗೆ ನಡೆದ ಮಾತುಕತೆ ಮಾಹಿತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಎಕ್?ಸ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ಪಶ್ಚಿಮ ಏಷ್ಯಾದಲ್ಲಿ ಸ್ಥಿರತೆ ಖಚಿತಪಡಿಸಿಕೊಳ್ಳುವ ಮತ್ತು ಸುರಕ್ಷಿತ ಸಮುದ್ರ ಮಾರ್ಗಗಳನ್ನು ನಿರ್ವಹಿಸುವ ಪ್ರಾಮುಖ್ಯತೆಯ ಬಗ್ಗೆ ಇಬ್ಬರೂ ನಾಯಕರು ಒಪ್ಪಿಕೊಂಡಿದ್ದಾರೆ. ಹಾರ್ಮುಜ್ ಜಲಸಂಧಿಯಲ್ಲಿ ಸುರಕ್ಷತೆ ಮತ್ತು ಸಂಚಾರ ಮುಕ್ತಗೊಳಿಸಲು ಪುನಃಸ್ಥಾಪಿಸುವ ತುರ್ತು ಅಗತ್ಯಗಳನ್ನ ಒತ್ತಿ ಹೇಳಿದ್ದಾರೆ. ನನ್ನ ಆತ್ಮೀಯ ಗೆಳೆಯ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರಿಂದ ಫೋನ್ ಕರೆ ಬಂತು. ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ನಾವು ಚರ್ಚಿಸಿದ್ದೇವೆ. ಜೊತೆಗೆ ಹಾರ್ಮುಜ್ ಜಲಸಂಧಿಯಲ್ಲಿ ಸುರಕ್ಷತೆ ಮತ್ತು ಮುಕ್ತ ಸಂಚಾರಕ್ಕೆ ಅಗತ್ಯವಿರುವ ಅಗತ್ಯತೆಗಳನ್ನು ತುರ್ತಾಗಿ ಪುನಃಸ್ಥಾಪಿಸುವ ಅಗತ್ಯವನ್ನು ಒಪ್ಪಿಕೊಂಡಿದ್ದೇವೆ ಎಂದು ಮೋದಿ ಎಕ್?ಸ ಮಾಡಿದ್ದಾರೆ. ಈ ಪ್ರದೇಶ ಮತ್ತು ಅದರಾಚೆಗೆ ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳಲು ನಾವು ನಿರಂತರ ಸಹಕಾರ ಮುಂದುವ–ರಿಸುತ್ತೇವೆ ಎಂದು ತಿಳಿಸಿದ್ದಾರೆ. ಇದಕ್ಕೂ ಮುನ್ನ ಏ. 14 ರಂದು ಪ್ರಧಾನಿ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್?ಡ ಟ್ರಂಪ್ ಅವರೊಂದಿಗೆ ಮಾತುಕತೆ ನಡೆಸಿದ್ದರು. ದೂರವಾಣಿ ಮೂಲಕ ಸುಮಾರು 40 ನಿಮಿಷಕ್ಕೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದರು. ಹಾರ್ಮುಜ್ ಜಲಸಂಧಿ ದಿಗ್ಬಂಧನದ ಬಗ್ಗೆಯೂ ಚರ್ಚಿಸಿದ್ದರು ಎಂದು ಅಮೆರಿಕದ ರಾಯಭಾರಿ ಗೋರ್ ತಿಳಿಸಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕೆ.ಪಿ.ನಂಜುಂಡಿ ವಿಶ್ವಕರ್ಮರಿಗೆ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಯಚೂರು ಜಿಲ್ಲಾ ಯುವ ಘಟಕದಿಂದ ಜನ್ಮ ದಿನದ ಶುಭಾಶಯಗಳು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷರು ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಸಮಾಜದ ಹೋರಾಟಗಾರರಾದ ಸನ್ಮಾನ್ಯ ಶ್ರೀ ಕೆ ಪಿ ನಂಜುಂಡಿ ವಿಶ್ವಕರ್ಮ ಅವರಿಗೆ ರಾಯಚೂರು ಜಿಲ್ಲಾ ಯುವ ಘಟಕದ ವತಿಯಿಂದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು ತಿಳಿಸಲಾಯಿತು.**



ಬೆಂಗಳೂರಿನ ಮಲ್ಲೇಶ್ವರಂ ನ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಕೇಂದ್ರ ಕಛೇರಿ ಶ್ರೀ ಲಕ್ಷ್ಮಿ ಗೋಲ್ಡ್ ಪ್ಯಾಲೇಸ್ ನಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ರಾಜ್ಯಾಧ್ಯಕ್ಷರಾದ ಕೆ.ಪಿ.ನಂಜುಂಡಿ ವಿಶ್ವಕರ್ಮ ಅವರ 60ನೇ ಹುಟ್ಟುಹಬ್ಬ ಸಂಭ್ರಮಾಚರಣೆ ಹಾಗೂ 3 ನೇ ವಧು– ವರರ ಅನ್ವೇಷಣೆ 2026ರ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಯಚೂರು ಜಿಲ್ಲಾ ಯುವ ಘಟಕ ಪ್ರಧಾನ ಕಾರ್ಯದರ್ಶಿ ಚನ್ನಪ್ಪ ಕೆ ಹೊಸಹಳ್ಳಿ ಅವರು ಹಾಗೂ ರಾಯಚೂರು, ಕೊಪ್ಪಳ ಜಿಲ್ಲಾ ಘಟಕ,

ಸಿರಗುಪ್ಪ ತಾಲೂಕ ಘಟಕದ ಸದಸ್ಯರು ಸೇರಿ ಕೆ.ಪಿ.ನಂಜುಂಡಿ ವಿಶ್ವಕರ್ಮ ಅವರಿಗೆ ಸಿಹಿ ತಿಂಡಿ ತಿನಿಸಿ ಆಯುಷ್ಯ, ಅರೋಗ್ಯ,ಸಕಲ ಸೌಭಾಗ್ಯ ಲಭಿಸಲಿ ಎಂದು ಹಾರೈಸಿದರು. ಸಮಾಜದ ಅಭಿವೃದ್ಧಿಗೆ ಇನ್ನಷ್ಟು ಶ್ರಮಿಸಿ, ಹೊರಟಾಗಳನ್ನು ಮುಂದುವರೆಸಿ ಸಮಾಜ–ಕ್ಕೆ ಮಾರ್ಗದರ್ಶನ ನೀಡಲೆಂದು ಶುಭಾಶಯಗಳನ್ನು ತಿಳಿಸಲಾಯಿತು. ಈ ಸಂಧರ್ಭದಲ್ಲಿ ಜೈ ವಿಶ್ವಕರ್ಮ ಜೈ ಕೆ ಪಿ ನಂಜುಂಡಿ ವಿಶ್ವಕರ್ಮ ಎಂದು ಘೋಷಣೆಗಳನ್ನು ಕೂಗಿ ಸಂತೋಷ ವ್ಯಕ್ತಪಡಿಸಲಾಯಿತು.

# ಲಿಂಗೈಕ್ಯ ಶ್ರೀ ಪರ್ವತಾ ಶಿವಾಚಾರ್ಯರ ಪುಣ್ಯ ಸ್ಮರಣೋತ್ಸವ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲೂಕಿನ ನಾವದಗಿ ಗ್ರಾಮ ಬ್ರಹನ್ಮಠದ ಲಿಂಗೈಕ್ಯ ಶತಾಯುಷಿ ಷ.ಬ್ರ.ಪರ್ವತಾ ಶಿವಾಚಾರ್ಯ ಮಹಾಸ್ವಾಮಿಗಳ 26ನೇ ವರ್ಷದ ಪುಣ್ಯಸ್ಮರಣೋತ್ಸವ ನಿಮಿತ್ಯವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಇಂದು (ಏ.18) ನಡೆಯಲಿವೆ.**




ಪುಣ್ಯಸ್ಮರಣೋತ್ಸವ ಅಂಗವಾಗಿ ಮುಂಜಾನೆ 8–00 ಘಂಟೆಗೆ ತುಂಬಗಿ ಸಾಸನೂರು ಹಿರೇಮಠದ ಷ.ಬ್ರ.ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯ ಹಾಗೂ ಬ್ರಹನ್ಮಠದ ಷ.ಬ್ರ. ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಪರ್ವತಾ ಶಿವಾಚಾರ್ಯರ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ.

ನಂತರ ನಾವದಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತರ ಸಮ್ಮುಖದಲ್ಲಿ ಲಿಂಗೈಕ್ಯ ಷ.ಬ್ರ.ಪರ್ವತಾ ಶಿವಾಚಾರ್ಯರ ಮಹಾಸ್ವಾಮಿಗಳ ಪಲ್ಲಕ್ಕಿಯೊಂದಿಗೆ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಕ್ತಿ ಭಾವದೊಂದಿಗೆ ಜರಗುವುದು. ನಂತರ ನೂತನ ಬ್ರಹನ್ಮಠದಲ್ಲಿ ಮಹಾಪ್ರಸಾದ ಕಾರ್ಯಕ್ರಮ ನಡೆಯುವುದು. ಯಾವತ್ತು ಶ್ರೀಮಠದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಲಿಂಗೈಕ್ಯ ಶ್ರೀ ಪರ್ವತಾ ಶಿವಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

# ಅಂಚೆಗೆ ಹೋಗದ ಪತ್ರ" ಚಿತ್ರದ 'ಕಣ್ಣಂಚಲೇ ಪ್ರೀತಿ' ಹಾಡು ಬಿಡುಗಡೆ

ನೈಜ್ಯ ದೆಸೆ ನ್ಯೂಸ್

**ಬೆಳಗಾವಿ: ನವಗ್ರಹ ಮತ್ತು ವರ್ಚಸ್ ಸಹಯೋಗದಲ್ಲಿ ಬೆಳಗಾವಿ ಹುಡುಗರ "ಅಂಚೆಗೆ ಹೋಗದ ಪತ್ರ" ಚಿತ್ರದ ಎರಡನೇ ಹಾಡು "ಕಣ್ಣಂಚಲೇ ಪ್ರೀತಿ ಶುರುವಾಯಿತು " ಬಿಡುಗಡೆಯಾಗಿ ಇದೀಗ ಯೂಟ್ಯೂಬ್ ನಲ್ಲಿ ಭರ್ಜರಿ ಸದ್ದು ಮಾಡುತ್ತಿದೆ.**



ಈ ಹಾಡಿಗೆ ಖ್ಯಾತ ಗಾಯಕ ಪಂಚಮ ಜೀವ ಧ್ವನಿಯಾಗಿದ್ದು, ಎಸ್.ಕೆ. ಎಸ್ ಅವರ ಸಾಹಿತ್ಯ ಹಾಡಿನ ಭಾವವನ್ನು ಮತ್ತಷ್ಟು ಮನಮುಟ್ಟುವಂತೆ ಮಾಡಿದೆ. ಸಂಪೂರ್ಣ ಉತ್ತರ ಕರ್ನಾಟಕದ ಪ್ರತಿಭೆಗಳ ಒಕ್ಕೂಟದಲ್ಲಿ ನಿರ್ಮಾಣವಾಗಿರುವ , ಉತ್ತರ ಕರ್ನಾಟಕದಲ್ಲೇ ಸಂಪೂರ್ಣ ಚಿತ್ರೀಕರಣವಾದ ಈ ಚಿತ್ರದಲ್ಲಿ ಪ್ರವೀಣ ಸುತಾರ ನಾಯಕನಾಗಿ ಮತ್ತು ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ನಾಯಕಿಯಾಗಿ ಸಹನಾ ಪ್ರಕಾಶ ಜೊತೆಗೆ "ರಕ್ಕಸಪುರದೊಳ" ಖ್ಯಾತಿಯ ಸೌಮ್ಯ ಅಮರಪೂರಕರ್ ಮತ್ತು "ಮಹಾನಟಿ ರನ್ನರ್ ಆಫ್" ವರ್ಷಾ ದಿಗ್ರೆಜೆ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಚಿತ್ರಕ್ಕೆ ದಿವಾಕರ ಎಂ ಅವರ ಸಂಗೀತ , ಮಂಜು ಬಸವರಾಜ ಛಾಯಾಗ್ರಹಣ, ಸಂಕಲನ ಶಿವ ಗಂಗಾಧರ ರಂಜಿತ ಪಾಂಡೆ ವಿ.ಎಫ್.ಎಕ್ಸ್ , ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ನಿರ್ವಹಿಸಿದ್ದು, ಸಹ ನಿರ್ದೇಶಕರಾಗಿ ವೀಣಾ ಮತ್ತು ವಿಶಾಲ ಕೆಲಸ ಮಾಡಿದ್ದು, ಪ್ರವೀಣ ತಾನಾಜಿ ಸುತಾರ, ಮಂಜುನಾಥ ಹುಲಮನಿ, ವರ್ಚಸ್ ಮತ್ತು ಪರದಿಶೆ ನಿರ್ಮಾಪಕರಾಗಿದ್ದಾರೆ. ಚಿತ್ರದ ಎಲ್ಲ ಕಾರ್ಯಗಳೂ ಮುಗಿದು ಬಿಡುಗಡೆಗೆ ಸಿದ್ಧವಾಗಿದ್ದು, ಮೇ ತಿಂಗಳ ಕೊನೆ ವಾರದಲ್ಲಿ ಚಿತ್ರವನ್ನು ಬಿಡುಗಡೆ ಮಾಡುವದಾಗಿ ನಿರ್ದೇಶಕ ಪ್ರವೀಣ ಸುತಾರ ತಿಳಿಸಿದ್ದಾರೆ.
–ಡಾ.ಪ್ರಭು ಗಂಜಿಹಾಳ

# ಅಧಿಕ ಉಷ್ಣಾಂಶ ಹಿನ್ನಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಪ್ರಭಾರ ಜಿಲ್ಲಾಧಿಕಾರಿ ಈಶ್ವರ ಕುಮಾರ ಕಾಂದೂ ಸಲಹೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಭಾರತೀಯ ಹವಾಮಾನ ಇಲಾಖೆಯ ವರದಿಯ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆಯಿದ್ದು, ಬಿಸಿ ಗಾಳಿ (ಹೀಟ್ ವೇವ್) ಎಚ್ಚರಿಕೆ ನೀಡಲಾಗಿದೆ.**

ಹೀಟ್ ವೇವ್ ಸ್ಟ್ರೋಕ್ ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪ–ರಿಣಾಮ ಬೀರುವ ಸಾಧ್ಯತೆಯಿರುವುದ–ರಿಂದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ ಕಾಂದೂ ಅವರು ಕೋರಿದ್ದಾರೆ. ಸೂರ್ಯನ ಶಾಖ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಏನು ಮಾಡಬೇಕು ಎಂಬುದರ ಕುರಿತು ಮಾಹಿತಿಯನ್ನು ನೀಡಿದ್ದಾರೆ.

ಸಾರ್ವಜನಿಕರು ರೇಡಿಯೋ,ಟಿವಿ, ದಿನ ಪತ್ರಿಕೆಗಳಲ್ಲಿ ಬಿಸಿಲಿನ ತಾಪಮಾನದ ಕು–ರಿತು ಮುನ್ಸೂಚನೆಗಳನ್ನು ಪಡೆದುಕೊಳ್ಳಬೇಕು. ಬಾಯಾರಿಕೆಯಿಲ್ಲದಿದ್ದರೂ ಸಾಧ್ಯವಾದಷ್ಟು ಹೆಚ್ಚಾಗಿ ನೀರನ್ನು ಕುಡಿಯುವುದು. ತೆಳುವಾದ ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸುವುದು, ಆದ–ಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಒಳ್ಳೆಯದು. ಬಿಸಿಲಿನಲ್ಲಿ ಹೊರಗೆ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಬೂಟುಗಳು ಅಥವಾ ಚಪ್ಪಲಗಳನ್ನು ಬಳಸಿ. ದೂರದ ಪ್ರಯಾಣವನ್ನು ರಾತ್ರಿ ವೇಳೆ ಮಾಡುವುದು ಉತ್ತಮ, ಒಂದು ವೇಳೆ ಪ್ರಯಾಣ ಮಾಡುವ ಸಂದರ್ಭ ಬಂದರೆ ಪ್ರಯಾಣ ಮಾಡುವಾಗ ನಿಮ್ಮೊಂದಿಗೆ ನೀರನ್ನು ತೆಗೆದುಕೊಂಡು ಹೋಗುವುದು.

ನೀವು ಹೊರಗೆ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿಯನ್ನು ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಸಹ ಬಳಸಬೇಕು. ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ,



ಶರಬತ್, ನಿಂಬೆ ನೀರು, ಮಜ್ಜಿಗೆ ಇತ್ಯಾದಿಗಳನ್ನು ಬಳಸಿ ಅದು ದೇಹವನ್ನು ಪುನಃ ತಂಪಾಗಿಡಲು ಸಹಾಯ ಮಾಡುತ್ತದೆ. ಪ್ರಾಣಿ/ಪಕ್ಷಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಿ. ಆದಷ್ಟು ಫ್ಯಾನಗಳನ್ನು ಬಳಸಿ, ಒದ್ದೆಯಾದ ಬಟ್ಟೆಗಳನ್ನು ಮತ್ತು ಆಗಾಗ್ಗೆ ತಣ್ಣೀರಿನಲ್ಲಿ ಸ್ನಾನ ಮಾಡಿ. ಕೆಲಸದ ಸಮಯವನ್ನು ಆದಷ್ಟು ತಂಪಾದ ಸಮಯದಲ್ಲಿ ಮಾಡುವುದು ಹಾಗೂ ಕೆಲಸದ ಸ್ಥಳದ ಬಳಿ ತಂಪಾದ ಕುಡಿಯುವ ನೀರನ್ನು ಒದಗಿಸಬೇಕು. ಕೆಲಸ ನಿರ್ವಹಿಸುವ ಗರ್ಭಿಣಿ ಮಹಿಳೆಯರು ಮತ್ತು ಅನಾರೋಗ್ಯದಲ್ಲಿರುವ ಕಾರ್ಮಿಕ–ರಿಗೆ ಹೆಚ್ಚಿನ ಗಮನ ನೀಡಬೇಕು.

ಕಲ್ಲಂಗಡಿ, ಕರಬೂಜ, ಕಿತ್ತಳೆ ದ್ರಾಕ್ಷಿ, ಅನನಾಸ್, ಸೌತೆಕಾಯಿ, ಎಳನೀರನ್ನು ಹೆಚ್ಚಾಗಿ ಸೇವಿಸಬೇಕು. ನವಜಾತ ಶಿಶುಗಳು, ಹಿರಿಯ ನಾಗರಿಕರು ಹಾಗೂ ಚಿಕ್ಕ ಮಕ್ಕಳು, ಗರ್ಭಿಣಿಯರು, ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು ಹಾಗೂ ಇತರ ಅರೋಗ್ಯ ಸಮಸ್ಯೆಗಳಿರುವವರು, ಅದರಲ್ಲೂ ವಿಶೇಷವಾಗಿ ಹೃದ್ರೋಗ ಹಾಗೂ ರಕ್ತದ ಒತ್ತಡದಿಂದ ಬಳಲುತ್ತಿರುವವರು ಹೆಚ್ಚು ಜಾಗರೂಕತೆ ವಹಿಸಬೇಕು. ಸಾರ್ವಜನಿಕರು ಏನು ಮಾಡಬಾರದು: ಮಕ್ಕಳು ಅಥವಾ ಸಾಕುಪ್ರಾಣಿಗಳನ್ನು ಬಿಸಿಲಿನಲ್ಲಿ ನಿಲ್ಲಿಸಿದ ವಾಹನಗಳ ಹತ್ತಿರ ಬಿಡಬೇಡಿ. ವಾಹನಗಳ ಒಳಾಂಗಣದಲ್ಲಿನ ಹೆಚ್ಚಿನ ತಾಪಮಾನವು ಅವ–ರಿಗೆ ಹಾಗೂ ಅವುಗಳಿಗೆ ಅಪಾಯಕಾ–ರಿಯಾಗಬಹುದು. ಕಪ್ಪು ಬಟ್ಟೆ ಅಥ–ವಾ ಬಿಗಿಯಾದ ಬಟ್ಟೆಗಳನ್ನು ಧರಿಸುವುದನ್ನು ತಪ್ಪಿಸಬೇಕು. ಹೊರಗಿನ ತಾಪಮಾನ ಹೆಚ್ಚಾದಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸಬೇಕು.

ಮಧ್ಯಾಹ್ನ 12 ರಿಂದ 3 ರವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಿ. ಬಿಸಿಲಿನ ಸಮಯದಲ್ಲಿ ಅಡುಗೆ ಮಾಡುವುದನ್ನು ತಪ್ಪಿಸಿ. ಅಡಿಗೆ ಪ್ರದೇಶವನ್ನು ಸಮರ್ಪಕವಾಗಿ ಗಾಳಿಯಾಡಲು ಬಾಗಿಲು ಮತ್ತು ಕಿಟಕಿಗಳನ್ನು ತೆರೆಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಹಾನಿಕಾರಕ ಪಾನೀಯಗಳನ್ನು ಸೇವಿಸಬೇಡಿ. ಇವು ಹೊಟ್ಟೆ ನೋವನ್ನು ಉಂಟು ಮಾಡುತ್ತದೆ. ಹಾನಿಕಾರಕವಾದ ಆಹಾರ ಮತ್ತು ಹಳಸಿದ ಆಹಾರವನ್ನು ಸೇವಿಸಬಾರದು. ಅಲ್ಲದೆ ಚಪ್ಪಲಿ ಧರಿಸದೆ ಹೊರಹೋಗುವ ಅಭ್ಯಾಸವನ್ನು ತಪ್ಪಿಸಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ ಕಾಂದೂ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ನೇಮಕಾತಿ ಪ್ರಕಟಣೆ

ಕರ್ನಾಟಕ ಹೈಕೋರ್ಟ್ ನೇಮಕಾತಿ 2026: 90 ಸಿವಿಲ್ ನ್ಯಾಯಾಧೀಶರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಹೈಕೋರ್ಟ್ ಏಪ್ರಿಲ್ 2026 ರ ಕರ್ನಾಟಕ ಹೈಕೋರ್ಟ್ ಅಧಿಕೃತ ಅಧಿಸೂಚನೆಯ ಮೂಲಕ ಸಿವಿಲ್ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 15, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 16–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15–ಮೇ–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 15–05–2026
ಅಧಿಕೃತ ವೆಬ್‌ಸೈಟ್: karnatakajudiciary.kar.nic.in

## 3ನೇ ಬಾರಿ ಮರು ಆಯ್ಕೆಯಾದ ರಾಜಸಭೆ ಉಪಾಧ್ಯಕ್ಷರಿಗೆ ಗಣ್ಯರ ಅಭಿನಂದನೆ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ರಾಜ್ಯಸಭೆಯ ಉಪಾಧ್ಯಕ್ಷರಾಗಿ ಮೂರನೇ ಬಾರಿ ಮರು ಆಯ್ಕೆಯಾದ ಹರಿವಂಶ ಅವರನ್ನು ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಸದನದ ಎಲ್ಲಾ ಪಕ್ಷಗಳ ಸದಸ್ಯರು ಅಭಿನಂಧಿಸಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು, ಹರಿವಂಶ ಅವರ ಮರು ಆಯ್ಕೆಯನ್ನು ಶ್ಲಾಘಿಸಿದರು.**



ತಾವು 4 ವರ್ಷಗಳಿಂದಲೂ ಉಪಾಧ್ಯಕ್ಷರನ್ನಾಗಿ ಅವರನ್ನು ನೋಡುತ್ತಿದ್ದೇನೆ. ಅಧಿವೇಶನ ನಡೆಸುವ ರೀತಿ ಅದ್ಭುತವಾಗಿದೆ. ಪೀಠದ ಘನತೆಯನ್ನು ಹೆಚ್ಚಿಸಿದೆ. ಸದನದಲ್ಲಿ ಶಿಸ್ತು ಪಾಲನೆಗೆ ಅವರ ಕ್ರಮಗಳು ಪ್ರಶಂಸನೀಯ ಎಂದರು. ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರು ಹರಿವಂಶ ಅವರನ್ನು ಎನ್‌ಡಿಎ ಅಭ್ಯರ್ಥಿಯನ್ನಾಗಿ ಪ್ರಸ್ತಾಪಿಸಿದರು. ಪ್ರಧಾನಮಂತ್ರಿ ಅವರು ಕೂಡ ಹರಿವಂಶ ಅವರ ಕಾರ್ಯ ವೈಖರಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ತಮ ರಾಜಯಸಭೆ ಸದಸ್ಯತ್ವ ಅವಧಿ ಶೀಘ್ರವೇ ಮುಕ್ತಾಯವಾಗಲಿದ್ದು ಹರಿವಂಶ ಅವರ ಮುಂದಿನ ಕಾರ್ಯ ವೈಖರಿ ಯಶಸ್ಸು ಆಗಲಿ ಎಂದು ಹಾರೈಸಿದ್ದಾರೆ. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷಗಳಿಗೆ ಸದನದಲ್ಲಿ ಹೆಚ್ಚಿನ ಅವಕಾಶ ಒದಗಿಸಬೇಕೆಂದು ಮನವಿ ಮಾಡಿದರು.ಹರಿವಂಶರ ಆಯ್ಕೆಯನ್ನು ಐತಿಹಾಸಿಕ ಎಂದು ಬಣ್ಣಿಸಿದ ಅವರು, ನಾಮನಿರ್ದೇಶಿತ ಸದಸ್ಯರಾಗಿ ಈ ಹುದ್ದೆಯನ್ನು ಅಲಂಕರಿಸಿದ ಮೊದಲ ವ್ಯಕಿಯಾಗಿದ್ದಾರೆ. ಈ ಹುದ್ದೆಗೆ ನಿಮ ಆಯ್ಕೆ ಮತ್ತೊಂದು ಉದಾಹರಣೆಯಾಗಿದೆ. ನೀವು ಈ ಸ್ಥಾನಕ್ಕೆ ಯೋಗ್ಯರು ಎಂಬುದನ್ನು ಇದು ತೋರಿಸುತ್ತದೆ ಎಂದು ಖರ್ಗೆ ಹೇಳಿದರು. ಇದೇ ವೇಳೆ, ಲೋಕಸಭೆಯಲ್ಲಿ ಉಪಸಭಾಧ್ಯಕ್ಷರ ಹುದ್ದೆ 2019ರಿಂದಲೂ ಖಾಲಿಯೇ ಉಳಿದಿರುವುದನ್ನು ಅವರು ಪ್ರಸ್ತಾಪಿಸಿದರು.ನಾವು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತೇವೆ. ಆದರೆ ಉಪಸಭಾಧ್ಯಕ್ಷರನ್ನು ಆಯ್ಕೆಮಾಡಲು ಸಾಧ್ಯವಾಗಿಲ್ಲ. ಇದರ ಅರ್ಥವೇನು? ಎಂದು ಪ್ರಶ್ನಿಸಿದರು. ಸರ್ಕಾರ ಆ ಹುದ್ದೆಯನ್ನು ಭರ್ತಿ ಮಾಡಬೇಕೆಂದು ಒತ್ತಾಯಿಸಿದರು. ಡಿಎಂಕೆ ಪರವಾಗಿ ಮಾತನಾಡಿದ ತಿರುಚಿ ಶಿವ ಅವರು ಹರಿವಂಶರ ಆಯ್ಕೆಯನ್ನು ಮೆಚ್ಚಿ, ಅವರು ನಾಲ್ಕು ಅವಧಿಗೆ ಉಪಾಧ್ಯಕ್ಷರಾಗಿದ್ದ ನಜಾ ಹೆಪ್ತುಲ್ಲಾ ಅವರ ದಾಖಲೆಯನ್ನು ಸಮನಾಗಿಸಲು ಅಥವಾ ಮೀರಿಸಲು ಸಾಧ್ಯವಾಗಲಿ ಎಂದು ಆಶಿಸಿದರು. ಹರಿವಂಶ್ ವಿವೇಕಿ ಮತ್ತು ಯೋಗ್ಯ ವ್ಯಕ್ತಿ ಎಂದು ವರ್ಣಿಸಿದರು. ಚರ್ಚೆಗಳ ವೇಳೆ ಉಂಟಾಗುವ ಉದ್ವಿಗ್ನ ಪರಿಸ್ಥಿತಿಗಳಲ್ಲೂ ಶಾಂತ ಮನಸ್ಥಿತಿಯನ್ನು ಕಾಪಾಡಿಕೊಳ್ಳುವ ಅವರ ಸಾಮರ್ಥ್ಯವನ್ನು ಹಲವರು ಪ್ರಶಂಸಿಸಿದರು. ವೈಎಸ್‌ಆರ್‌ಸಿಪಿ ಸದಸ್ಯ ಸುಭಾಷ್ ಚಂದ್ರ ಬೋಸ್ ಪಿಲ್ಲಿ ಅವರು, ಸದನದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಕ್ರಮಬದ್ಧ ಕಾರ್ಯಚರಣೆಯನ್ನು ಹರಿವಂಶ ಖಚಿತಪಡಿಸಿದ್ದಾರೆ ಎಂದು ಹೇಳಿದರು. ಎಐಎಡಿಎಂಕೆ ಸದಸ್ಯ ಎಂ. ತಂಬಿದುರೈ, ಅಧ್ಯಕ್ಷತೆ ವಹಿಸುವವರ ಯಶಸ್ಸುಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಇರುತ್ತದೆ ಎಂದು ಹೇಳಿದರು. ಆರ್‌ಜೆಡಿ ನಾಯಕ ಮನೋಜ್ ಝಾ, ಹರಿವಂಶರ ಮಾಜಿ ಪ್ರಧಾನಮಂತ್ರಿ ಚಂದ್ರಶೇಖರ್ ಅವರೊಂದಿಗೆ ಹೊಂದಿದ್ದ ಸಂಬಂಧವನ್ನು ಸ್ಮರಿಸಿದರು. ಇದೇ ವೇಳೆ, ಸಣ್ಣ ಪಕ್ಷಗಳಿಗೆ ಮಾತನಾಡಲು ಸಮರ್ಪಕ ಅವಕಾಶ ನೀಡಬೇಕೆಂದು ಮನವಿ ಮಾಡಿದರು.

# ಮೈಲಾರ ಕ್ಷೇತ್ರದ ಧರ್ಮದರ್ಶಿಗಳಿಂದ ಕಾರುಣ್ಯ ಆಶ್ರಮಕ್ಕೆ ಗೌರವದ ಶುಭಾಶೀರ್ವಾದ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಹೂವಿನ ಹಡಗಲಿ ತಾಲೂಕಿನ ಸುಪ್ರಸಿದ್ಧ ಸುಕ್ಷೇತ್ರ ಮೈಲಾರಲಿಂಗೇಶ್ವರ ದೇವಸ್ಥಾನದ ವಂಶ ಪಾರಂಪರ್ಯ ಧರ್ಮಾಧಿಕಾರಿಗಳಾದ ಶ್ರೀ ಕಪಿಲ ಪೀಠದ ಸಿಂಹಾಸನಾಧಿಪತಿಗಳಾದ ಶ್ರೀ ಶ್ರೀ ಶ್ರೀ ಗುರು ವೆಂಕಪ್ಪಯ್ಯ ಒಡೆಯರಿಂದ ಹಾಗೂ ಕರ್ನಾಟಕ ಗ್ರಾಮೀಣ ಯುವ ಕನ್ನಡ ಕ್ರಿಯಾ ಸಮಿತಿ ಮೈಲಾರ ಹಾಗೂ ಜನನಿ ಪುಷ್ಪ ಕಲಾ ಯುವಕ ಸಂಘ (ರಿ)ಹ್ಯಾರಡ ಇವರುಗಳಿಂದ ಸಿಂಧನೂರಿನ ಕಾರುಣ್ಯ ನೆಲೆ ವೃದ್ದಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರನ್ನು ಮೈಲಾರದ ಅವರ ನಿವಾಸದಲ್ಲಿ ಗೌರವಿಸಿ ಆಶೀರ್ವದಿಸಿದರು.**



ಈ ಸಂದರ್ಭದಲ್ಲಿ ಆಶ್ರಮದ ನಿರ್ವಹಣೆ ಮತ್ತು ನಿತ್ಯ ನಿರಂತರ ಬದುಕಿನ ಬಗ್ಗೆ ವಿವರಣೆ ಪಡೆದುಕೊಂಡರು. ನಂತರ ಸುಕ್ಷೇತ್ರ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ಧರ್ಮದರ್ಶಿಗಳಾದ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್ ಅವರು ನಮ್ಮ ಕರುನಾಡಿನಲ್ಲಿ ಕಾರುಣ್ಯ ಎನ್ನುವ ಕೈಲಾಸದ ಅನುಭವ ಮಂಟಪಕ್ಕೆ ಶ್ರೀ ಮೈಲಾರಲಿಂಗೇಶ್ವರನ ಹಾಗೂ ಸಕಲ ದೇವಾನುದೇವತೆಗಳ ಶುಭಾಶೀರ್ವಾದವಿರುತ್ತದೆ.ಜಂಗಮರಾಗಿ ಹಿರೇಮಠ ಕುಟುಂಬ ಮಾಡುತ್ತಿರುವ ಸೇವೆ ಶ್ಲಾಘನೀಯ ನಮ್ಮ ಮೈಲಾರ ಸುಕ್ಷೇತ್ರದ ನಮ್ಮೆಲ್ಲರ ಮತ್ತು ಭಕ್ತರ ಸಹಕಾರ ನಿರಂತರವಾಗಿ ಕಾರುಣ್ಯ ಕುಟುಂಬಕ್ಕೆ ದೊರೆಯುತ್ತದೆ.

ಮಾನವೀಯತೆಯ ಮಾನವ ಧರ್ಮದ ಸಂಸ್ಕೃತಿಯನ್ನು ಕಾಪಾಡುವ ನಿಟ್ಟಿನಲ್ಲಿ ಕಾರುಣ್ಯ ಆಶ್ರಮವು ಸತ್ಯ ಪ್ರಾಮಾಣಿಕ ಸೇವೆಯ ಮೂಲಕ ಮಾನವ ಧರ್ಮಕ್ಕೆ ಮಾದರಿಯಾಗಿದೆ. ಇಂತಹ ಸೇವೆ ಮಾಡುತ್ತಿರುವ ಅತ್ಯದ್ಭುತ ಸಾಧಕರಾದ ಚನ್ನಬಸವ ಸ್ವಾಮಿ ಹಿರೇಮಠ ಅತೀ ಕಿರಿಯ ವಯಸ್ಸಿನಲ್ಲಿ ಇಂತಹ ನಿರ್ಧಾರ ತೆಗೆದುಕೊಂಡು ಬಹುದೊಡ್ಡ ಸಾಮಾಜಿ–ಕ ಜವಾಬ್ದಾರಿಯನ್ನು ನಿಭಾಯಿಸುತ್ತಿರುವುದು ನಮ್ಮೆಲ್ಲರಿಗೆ ಸಂತೋಷವಾಗಿದೆ. ಇವರಿಗೆ ಇವರ ಕುಟುಂಬಕ್ಕೆ ಹಾಗೂ ಆಶ್ರಮಕ್ಕೆ ಸಹಾಯ ಸಹಕಾರ ಮಾಡುವ ಸಮಸ್ತ ದಾನಿಗಳಿಗೆ ನಮ್ಮ ಸುಕ್ಷೇತ್ರದ ಶುಭಾಶೀರ್ವಾದವಿರುತ್ತದೆ ಎಂದು ಆಶೀರ್ವಚನೆ ನೀಡಿ ಆಶೀರ್ವದಿಸಿದರು. ಈ ಕಾರ್ಯಕ್ರಮದಲ್ಲಿ ಪುಟ್ಟಪ್ಪ ತಂಬೂರಿ ಸಂಸ್ಥಾಪಕರು ಕರ್ನಾಟಕ ಗ್ರಾಮೀಣ ಯುವ ಕನ್ನಡ ಕ್ರಿಯಾ ಸಮಿತಿ (ರಿ) ಮೈಲಾರ. ಹಾಗೂ ಚಮನ್ ಸಾಹೇಬ್ ಸಂಸ್ಥಾಪಕರು ಜನನಿ ಪುಷ್ಪಕಲಾ ಯುವಕ ಸಂಘ(ರಿ)ಹ್ಯಾರಡ. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಬಸವ ಸ್ವಾಮಿ. ಮತ್ತು ಮೈಲಾರಲಿಂಗೇಶ್ವರನ ಸಮಸ್ತ ಭಕ್ತರು ಉಪಸ್ಥಿತರಿದ್ದರು.

# ಹೂವಿನಹಡಗಲಿಯ ಗವಿಮಠದ ಶ್ರೀಗಳಿಂದ ಕಾರುಣ್ಯಾಶ್ರಮಕ್ಕೆ ಆಶೀರ್ವಾದ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಪಟ್ಟಣದ ಕೊಪ್ಪಳ ಗವಿಮಠದ ಶಾಖಾ ಮಠವಾದ ಡಾ. ಹಿರಿ ಶಾಂತವೀರ ಮಹಾಸ್ವಾಮಿಗಳು ಶ್ರೀಮಠದಲ್ಲಿ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು ಅವರನ್ನು ಗೌರವಿಸಿ ಸಹಾಯ ಸೌಜನ್ಯದ ಮೂಲಕ ಆಶೀರ್ವದಿಸಿದರು.**

ಈ ಕ್ಷಣದಲ್ಲಿ ಶ್ರೀಗಳ ಮುಂದೆ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರು ತಮ್ಮ ಆಶೀರ್ವಾದ ಮತ್ತು ನಾಡಿನ ರಾಜಕೀಯ ಧುರೀಣರ ಮತ್ತು



ರೈತರ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳ ಸಾರ್ವಜನಿಕರ ಸಹಾಯ ಸಹಕಾರದೊಂದಿಗೆ ಆಶ್ರಮದ ನಿರ್ವಹಣೆ ನಡೆಯುತ್ತಿದೆ. ಆದ–ರೆ ಸರ್ಕಾರ ಸ್ವಂತ ಜಾಗ ಕಲ್ಪಿಸಿಕೊಟ್ಟು ಅನುದಾನ ನೀಡಿದರೆ ಇನ್ನು ಹೆಚ್ಚಿನ ಸೇವೆ ಮಾಡಲು ಅನುಕೂಲವಾಗುತ್ತದೆ. ಇದರ ಜೊತೆಯಲ್ಲಿ ಅನೇಕ ಸಮಾಜ ಪರ ಜನಪರ ಕಾರ್ಯಗಳನ್ನು ಮಾಡುವ ಉದ್ದೇಶವನ್ನು ಇಟ್ಟುಕೊಂಡಿರುವ ಕಾರುಣ್ಯ ಸಂಸ್ಥೆಗೆ ಸರ್ಕಾರದ ಸೌಲಭ್ಯಗಳು ದೊರೆಯದಿರುವುದು ಬೇಸರದ ಸಂಗತಿಯಾಗಿದೆ ಎಂದು ಶ್ರೀಗಳ ಮುಂದೆ ಭಾವನಾತ್ಮಕವಾಗಿ ಅಳಲು ತೋಡಿಕೊಂಡರು.

ನಂತರ ಶ್ರೀಗಳು ಕಾರುಣ್ಯ ಕುಟುಂಬ ಮಾಡುತ್ತಿರುವ ಸತ್ಯ ಪ್ರಾಮಾಣಿಕ ಸೇವೆಗೆ ಮುಂದಿನ ದಿನಮಾನಗಳಲ್ಲಿ ಖಂಡಿತವಾಗಿಯೂ ಸ್ವಂತ ಜಾಗ ಹಾಗೂ ಅನುದಾನ ದೊರೆಯುತ್ತದೆ ನಮ್ಮ ಹಾಗೂ ನಾಡಿನ ಹರ ಗುರು ಚರಮೂರ್ತಿಗಳ ಮತ್ತು ಶರಣ ಸಂಸಾರ ಬಸವಾದಿ ಶರಣರ ಆಶೀರ್ವಾದ ಸದಾವಕಾಲ ಕಾರುಣ್ಯ ಕುಟುಂಬದ ಮೇಲಿರುತ್ತದೆ. ಜಂಗಮನ ಜೋಳಿಗೆಯು ಅನಾಥರ ಬಾಡಿಗೆ ಎನ್ನುವ ನಿಮ್ಮೆಲ್ಲರ ಸಂಕಲ್ಪ ಆದಷ್ಟು ಬೇಗನೆ ಈಡೇರುತ್ತದೆ ಎಂದು ಡಾ. ಹಿರಿ ಶಾಂತವೀರ ಮಹಾಸ್ವಾಮಿಗಳು ಡಾ.ಚನ್ನಬಸವ ಸ್ವಾಮಿ ಹಿರೇಮಠ ಅವ–ರಿಗೆ ಆಶೀರ್ವದಿಸಿ ಸಮಾಧಾನಪಡಿಸಿದರು. ಈ ಸಮಯದಲ್ಲಿ ಆಶ್ರಮದ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಬಸವ ಸ್ವಾಮಿ. ಹಾಗೂ ಶ್ರೀಮಠದ ಅಪಾರ ಭಕ್ತರು ಉಪಸ್ಥಿತರಿದ್ದರು.

# ಜನ್ಮದಿನ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ನಲವಡೆ ಕುಟುಂಭದ ವತಿಯಿಂದ ಮಂಗಳವಾರರಂದು ಪುತ್ರ ಸಾಯಿಸಮಥ–ರ್ನ 9ನೇ ವರ್ಷದ ಜನ್ಮದಿನದ ಅಂಗವಾಗಿ ಆಸ್ಪತ್ರೆಗಳಲ್ಲಿನ ಬಡ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸುವದರೊಂದಿಗೆ ಸಸಿಗಳನ್ನು ನೆಡುವ ಮೂಲಕ ಪರಿಸರ ಪ್ರೇಮದ ಜಾಗೃತಿ ಕಾರ್ಯವನ್ನು ಮಾಡಿದ್ದಾರೆ.**

ಪಟ್ಟಣದ ಸಮೂದಾಯ ಆರೋಗ್ಯ ಕೇಂದ್ರದಲ್ಲಿನ ಬಡ ರೋಗಿಗಳಿಗೆ ಬ್ರೇಡ್, ಬೀಸ್ಕಿತ್, ಹಣ್ಣು ಹಂಪಲುಗಳನ್ನು ವಿತರಿಸಿದ ಹಣಮಂತ ನಲವಡೆ ಕುಟುಂಭದವರು ರೋಗಿಗಳೊಂದಿಗೆ ಕುಷಲೋಪಚಾರವನ್ನು ಗೈದರು. ಈ ಸಮಯದಲ್ಲಿ ಸಮೂದಾಯ ಆರೋಗ್ಯ




ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ ಅವರು ಮಾತನಾಡಿ ಜನ್ಮ ದಿನದ ಅಂಗವಾಗಿ ಕೇಕ್ ಕತ್ತರಿಸಿ ಬರ್ತಡೆ ಪಾರ್ಟಿ ಎಂಬ ಪಾಶ್ಚಿಮಾತ್ಯ ಸಂಸ್ಕೃತಿ ಅನುಸ–ರಿಸುತ್ತಿರುವ ಇಂದಿನ ದಿನಮಾನದಲ್ಲಿ ಹಣಮಂತ ನಲವಡೆ ಕುಟುಂಭದ ಬಾಂದವರು ತಾಳಿಕೋಟೆಯ ಸಮೂದಾಯ ಆರೋಗ್ಯ ಕೇಂದ್ರಕ್ಕೆ ಬೆಟ್ಟಿ ನೀಡಿ ಬಡ ರೋಗಿಗಳಿಗೆ ಹಣ್ಣು ಹಂಪುಗಳನ್ನು ನೀಡಿ ರೋಗಿಗಳಿಗೆ ಚೇತರಿಕೆ ಮತ್ತು ಸಾಂತ್ವನ ನೀಡುವಂತಹ ಕಾರ್ಯ ಮಾಡಿರುವದು ಶ್ಲಾಘನೀಯವಾಗಿದೆ.

ರೋಗಿಗಳಿಗೆ ಪೌಷ್ಟಿಕಾಂಶದ ಹಣ್ಣು ಹಂಪಲು ಆಹಾರ ಒದಗಿಸುವದರೊಂದಿಗೆ ರೋಗಿಗಳಲ್ಲಿ ಹೊಸ ಚೈತನ್ಯ ಮೂಡಲಿದೆ ಇಂತಹ ಕಾರ್ಯಕ್ರಮಗಳು ರೋಗಿಗಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಲು ಮತ್ತು ಸಮಾಜದೊಂದಿಗೆ ಬೆರೆಯಲು ಸಹಾಯ ಮಾಡುತ್ತವೆ. ಇದರ ಜೊತೆಗೆ ಪರಿಸರ ಪೂರಕವಾದ ಪ್ರೇಮತ್ವವನ್ನು ಮಕ್ಕಳಲ್ಲಿ ಬೆಳೆಸಲು ಸಸಿ ನಡುವ ಕಾರ್ಯಕ್ರಮ ಹಮ್ಮಿಕೊಂಡಿರುವದು ಗುಣಗಾನಮಯವಾಗಿದೆ ಎಂದರು.ಈ ಸಮಯದಲ್ಲಿ ಡಾ.ವಿಜಯಲಕ್ಷ್ಮೀ ಹಜೇರಿ, ಡಾ.ಮಧು ಅಗರವಾಲಾ, ಹಣಮಂತ ನಲವಡೆ, ಶ್ರೀಮತಿ ಭಾರತಿ(ಸ್ನೇಹಾ) ನಲವಡೆ, ಜಿ.ಟಿ.ಘೋರ್ಪಡೆ, ರಾಘವೇಂದ್ರ ನಲವಡೆ, ರಾಜಶೇಖರ ಮ್ಯಾಗೇರಿ, ಅಂಬಾಜಿ ಘೋರ್ಪಡೆ, ಪ್ರಾರ್ಥನಾ ನಲವಡೆ, ಭೂಮಿಕಾ ಘೋರ್ಪಡೆ, ಪ್ರವೀಣ್ ಘೋರ್ಪಡೆ, ಮಾರುತಿ ಕಾಸೇದ, ರಣಜಿತ್‌ಸಿಂಹ್ ಘೋರ್ಪಡೆ, ಗಂಗಾ ಘೋರ್ಪಡೆ, ವಿಜಯಸಿಂಹ್ ಘೋರ್ಪಡೆ, ಅದ್ವಿತಾ ಘೋರ್ಪಡೆ, ಅವಂತಿಕಾ ಘೋರ್ಪಡೆ, ಮೊದಲಾದವರು ಉಪಸ್ಥಿತರಿದ್ದರು.

# ಮನೆಗಣತಿ ಆರಂಭ: ತಹಶೀಲ್ದಾರ್ ಚಾಲನೆ ಸಾರ್ವಜನಿಕರ ಸಹಕಾರ ಅಗತ್ಯ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇ–ರಿಯ ಅವರಣದಲ್ಲಿ ಗುರುವಾರ ತಹಶೀಲ್ದಾರ್ ಭೀಮರಾಯ ರಾಮಸಮುದ್ರ ಅವರು ಭಾರತದ ಜನಗಣತಿ 2027ರ ಅಂಗವಾಗಿ ಮಾನ್ವಿ ತಾಲೂಕಿನ ಗ್ರಾಮೀಣ ವಿಭಾಗದ ಮನೆಗಳ ಪಟ್ಟಿ ಹಾಗೂ ಮನೆಗಣತಿಗೆ ಚಾಲನೆ ನೀಡಿ ಮಾತನಾಡಿದರು.**

ಏ.1ರಿಂದ ಏ.15ರವರೆಗೆ ಸಾರ್ವಜನಿಕರಿಗೆ ಸ್ವಯಂ ಗಣತಿ ಮಾಡಿಕೊಳ್ಳುವ ಅವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ ತಾಲೂಕಿನ ಗ್ರಾಮೀಣ ಭಾಗದಲ್ಲಿ ಸುಮಾರು 9 ಸಾವಿರಕ್ಕೂ ಹೆಚ್ಚು ನಾಗರಿಕರು ತಮ್ಮ ಮೊಬೈಲ್‌ಗಳ ಮೂಲಕ ಸ್ವಯಂ ಗಣತಿಯನ್ನು ದಾಖಲಿಸಿಕೊಂಡಿದ್ದಾರೆ. 38 ಗಣತಿ ಮೇಲ್ವಿಚಾರಕರು ಹಾಗೂ 239 ಗಣತಿದಾರರ ವ್ಯಾಪ್ತಿಯಲ್ಲಿ ಈ ಕಾರ್ಯ ನಡೆದಿದೆ ಎಂದು ತಿಳಿಸಿದರು. ಏ.16ರಿಂದ ಮೇ.15ರವರೆಗೆ ನಡೆಯುವ ಮೊದಲ ಹಂತದ ಮನೆಗಣತಿಯಲ್ಲಿ ಗಣತಿದಾರರು ಮನೆಮನೆಗೆ ತೆರಳಿ ವಾಸಿಸುವವರ 34 ಅಂಶಗಳ ಮಾಹಿತಿಯನ್ನು ಸಂಗ್ರಹಿಸಿ ದಾಖಲಿಸಲಿದ್ದಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಾನ್ವಿ ತಾಲೂಕಿನ ಗ್ರಾಮೀಣ ವಿಭಾಗದ ಗಣತಿ ಮೇಲ್ವಿಚಾರಕರು ಹಾಗೂ ಗಣತಿದಾರರು ಭಾಗವಹಿಸಿದ್ದರು.

## ಏ.19 ರಿಂದ ಗಡಿಗ್ರಾಮ ಬಳೂರ್ಗಿ ನಂದಿ ಬಸವೇಶ್ವರ ಜಾತ್ರೆಯ ಸಡಗರ!

# ನಂದಿ ಬಸವನ ತೊಟ್ಟಿಲು ಕಾರ್ಯಕ್ರಮಕ್ಕೆ ಹರಿದು ಬರುವ ಭಕ್ತ ಸಾಗರ

ನೈಜ್ಯ ದೆಸೆ ನ್ಯೂಸ್

**ಅಫಜಲಪುರ: ತಾಲೂಕಿನ ಕಡೆಯ ಹಳ್ಳಿ ಬಳೂರ್ಗಿ ಗ್ರಾಮದ ನಂದಿ ಬಸವೇಶ್ವರ ಜಾತ್ರೆಯು ಏಪ್ರಿಲ್ 19 ರಿಂದ 21ರ ವರೆಗೆ ಅದ್ದೂ–ರಿಯಾಗಿ ಸಂಭ್ರಮದಿಂದ ಜರುಗಲಿದೆ ಎಂದು ದೇವಸ್ಥಾನದ ಕಮಿಟಿ ಸದಸ್ಯರು ತಿಳಿಸಿದರು.**

ಸುದ್ದಿಗಾರರೊಂದಿಗೆ ಮಾಹಿತಿ ಹಂಚಿಕೊಂಡ ಗ್ರಾಮದ ಮುಖಂಡ ಅರ್ಜುನ ಸೋಮಜಾಳ ಪ್ರತಿವರ್ಷದಂತೆ ಈ ವರ್ಷವೂ ಕೂಡಾ ಉದ್ಬವ್ ಲಿಂಗ ನಂದಿ ಬಸವೇಶ್ವರ ಜಾತ್ರೆಯ ಸಡಗರವು ಏಪ್ರಿಲ್19 ರಿಂದ ಪ್ರಾರಂಭವಾಗುವುದು.ಅಂದು ರಾತ್ರಿ 8 ಗಂಟೆಗೆ ಕಳಸ ಮೆರವಣಿಗೆ ಪ್ರಾರಂಭವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಾಜಾ ಭಾಜಂತ್ರಿಗಳೊಂದಿಗೆ ಕುಂಭ ಕಳಸದೊಂದಿಗೆ ಮೆರವಣಿಗೆ ನಡೆಯುವುದು.ಮಧ್ಯರಾತ್ರಿ ಪುರಂತರ ಸೇವೆ ನಡೆಯುತ್ತದೆ ಎಂದರು.




ಮರುದಿನ ಏ.20 ರಂದು ಬೆಳಿಗ್ಗೆ ನಂದಿಕೋಲ ಮೆರವಣಿಗೆ ಪಲ್ಲಕ್ಕಿ ಮೆರವಣಿಗೆ ಹತ್ತು ಹಲವು ವಾದ್ಯಗಳೊಂದಿಗೆ ಅದ್ದೂರಿಯಾಗಿ ಜರುಗುವುದು.

ಅಂದು ಸಾಯಂಕಾಲ 5 ಗಂಟೆಗೆ ಜಾತ್ರೆಯ ವಿಶೇಷ ಅದ್ಭುತ ಕ್ಷಣ ನಂದಿ ಬಸವೇಶ್ವರ ತೊಟ್ಟಿಲು ಕಾರ್ಯಕ್ರಮ ಜರುಗಲಿದೆ ಎಂದರು. ತದನಂತರ ಮಾತನಾಡಿದ ಗ್ರಾಮದ ಹಿರಿಯ ಮುಖಂಡ ಮನೋಹರ ರಾಠೋಡ ನಂದಿ ಬಸವೇಶ್ವರ ಜಾತ್ರೆಯ ಸಡಗರ ನೋಡಲು ಎರಡು ಕಣ್ಣು ಸಾಲದು.ಏ.20 ರಂದು ತೊಟ್ಟಿಲು ಕಾರ್ಯಕ್ರಮ ಮುಗಿದ ನಂತರ ಗ್ರಾಮದ ಯುವಕರು ಸಾರ್ವಜನಿಕರು ಬೇರೆ ಬೇರೆ ರಾಜ್ಯ ವಿದೇಶಗಳಿಂದ ಬಂದವರು ಹರಕೆಗಳನ್ನು ತಿರಿಸುತ್ತಾರೆ.ಮರುದಿನ ಏ.21 ರಂದು ದಿನಪೂರ್ತಿ ಹಳ್ಳಿ ಸೊಗಡಿನ ಗೀ ಗೀ ಪದಗಳು ಜರುಗುತ್ತವೆ. ತದನಂತರ ಸಾಯಂಕಾಲ 5 ಗಂಟೆಗೆ ನಾಡಿನ ಹೆಸರಾಂತ ಜಗ್ಗಿ ಪೈಲ್ವಾನರಿಂರ ಕುಸ್ತಿಗಳು ಜರಗುತ್ತವೆ.

ಅದಲ್ಲದೆ ಈ ವರ್ಷ ವಿಶೇಷವಾಗಿ ನಮ್ಮ ಗ್ರಾಮದ ತರುಣ ಮಂಡಳಿಯಿಂದ ಸುಂದರ ಸಾಮಾಜಿಕ ನಾಟಕ ದುಡ್ಡು ದಾರಿ ಬಿಡಿಸಿತು ಅರ್ಥಾರ್ತ ಅಣ್ಣನ ಕಣ್ಣಿರು ನಾಟಕ ಪ್ರದರ್ಶನಗೊಳ್ಳಲಿದ್ದು,ಏ.20 ರಂದು ಪ್ರಥ–ಮ ಪ್ರಯೋಗ ಏ.21ರಂದು ದ್ವಿತೀಯ ಪ್ರಯೋಗ ಜರುಗಲಿದೆ.ಈ ಎಲ್ಲಾ ಜಾತ್ರೆಯ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಬೇಕು ಎಂದು ನಂದಿ ಬಸವೇಶ್ವರ ಭಕ್ತರಲ್ಲಿ ಮನವಿ ಮಾಡಿದರು. ಇದೆ ಸಂದರ್ಭದಲ್ಲಿ ನಂದಿ ಬಸವೇಶ್ವರ ಕಮಿಟಿ ಸದಸ್ಯರಾದ ಚನ್ನಬಸಪ್ಪ ಚಾಕೊಂಡಿ,ಅ–ರ್ಜುನ ಸೋಮಜಾಳ,ಮಲ್ಲಿನಾಥ ಮಠಪತಿ,ಶ್ರೀಶೈಲ ಪಾಟೀಲ,ಫಲಾಲಸಿಂಗ ರಾಠೋಡ,ಶರಣಪ್ಪ ದೊಡ್ಮನಿ, ಶರಣು ಕಲಶೆಟ್ಟಿ, ಹಾಗೂ ಗ್ರಾಮದ ಮುಖಂಡರಾದ ಮನೋಹರ ರಾಠೋಡ, ಶಾಂತಪ್ಪ ಚಲಗೇರಿ,

ಮಲ್ಲಿನಾಥ ವಾಡಿ,ಬಸಣ್ಣ ನಾವಿ,ಸಿದ್ದು ಹಸರಗುಂಡಗಿ,ರಾಜು ಕೊತಲಿ,ಗಣಪತಿ ಹೂಗಾರ,ಶಿವಪ್ಪ ಪಾಟೀಲ,ಭೀಮು ಹೂಗಾರ,ಶಿವಪ್ಪ ಹೂಗಾರ,ವಿರೇಶ ವಾಡಿ,ಮಲ್ಲು ಮುಗಳಿ,ಸುರೇಶ ರೆಡ್ಡಿ,ಸುನೀಲ ಗುತ್ತೇದಾರ, ಭಿಮು ಮಠಪತಿ,ಅಂಬ–ರೀಶ್ ಪೊದ್ದಾರ,ಮೌನೇಶ ಪೊದ್ದಾರ,ವಿರೇಶ ಸ್ವಾಮಿ,ವಿಜು ಪಾಟೀಲ,ಶ್ರೀಶೈಲ ಪಾಟೀಲ,ಗುರು ಮಠಪತಿ,ಸಿದ್ದು ರೋಡಗಿ,ಸೇರಿದಂತೆ ಬಳೂರ್ಗಿ ಹಲವು ಮುಖಂಡರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ


### ಬಿ ಟೆಕ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್

ಬಿ ಟೆಕ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕೋರ್ಸ್ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಸೈನ್ಸ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಥವಾ ಎಐ ತತ್ವಗಳೆಂದು ಕರೆಯಲ್ಪಡುವ ಮೂಲಭೂತ ಅಂಶಗಳನ್ನು ಪ್ರೋಗ್ರಾಮಿಂಗ್ ಭಾಷಾ ಜ್ಞಾನ ಮತ್ತು ಯಂತ್ರ ಕಲಿಕೆ ತಂತ್ರಗಳ ಸಹಾಯದಿಂದ ಹೊಸ ಬುದ್ಧಿವಂತ ವ್ಯವಸ್ಥೆಗಳು ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ರೂಪಿಸಲು ಕಲಿಸುತ್ತದೆ. ಬಿಟೆಕ್ ಇನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಪಠ್ಯಕ್ರಮವು ಅಲ್ಗಾರಿದಮ್‌ಗಳ ವಿನ್ಯಾಸ ಮತ್ತು ವಿಶ್ಲೇಷಣೆ, ಕಂಪ್ಯೂಟರ್ ಸಿಸ್ಟಮ್ ಆರ್ಕಿಟೆಕ್ಚರ್, ಮೆಷಿನ್ ಲರ್ನಿಂಗ್ ಪರಿಚಯ, ಡೇಟಾ ಸಂವಹನ ಮತ್ತು ಕಂಪ್ಯೂಟರ್ ನೆಟ್‌ವರ್ಕ್‌ಗಳು ಮತ್ತು ನೈಸರ್ಗಿಕ ಭಾಷಾ ಸಂಸ್ಕರಣೆಯಂತಹ ವಿಷಯಗಳನ್ನು ಒಳಗೊಂಡಿದೆ. ಬಿ.ಟೆಕ್ ಇನ್ ಎಐ ಪದವೀಧರರು ಪೈಥಾನ್, ಟೆನ್ಸರ್‌ಫ್ಲೋ, ಪೈಟಾರ್ಚ್‌ನಂತಹ ಪ್ರಮುಖ ಪ್ರೋಗ್ರಾಮಿಂಗ್ ಭಾಷೆಗಳು ಮತ್ತು ಎಐ ಚೌಕಟ್ಟುಗಳಲ್ಲಿ ಪ್ರಾವೀಣ್ಯತೆಯಂತಹ ತಾಂತ್ರಿಕ ಜ್ಞಾನವನ್ನು ಮೀರಿ ವೈವಿಧ್ಯಮಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತಾರೆ, ಜೊತೆಗೆ ಸಮಸ್ಯೆ ಪರಿಹಾರ, ವಿಮರ್ಶಾತ್ಮಕ ಚಿಂತನೆ, ಡೇಟಾ ವ್ಯಾಖ್ಯಾನ ಮತ್ತು ಡೇಟಾ-ಚಾಲಿತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯಗಳಂತಹ ವಿಶ್ಲೇಷಣಾತ್ಮಕ ಕೌಶಲ್ಯಗಳನ್ನು ಹೊಂದಿರುತ್ತಾರೆ. ಕೋರ್ಸ್ ಮುಗಿದ ನಂತರ, ಆರೋಗ್ಯ ರಕ್ಷಣೆ, ಹಣಕಾಸು, ಆಟೋಮೋಟಿವ್ ಮತ್ತು ಇ-ಕಾಮರ್ಸ್‌ನಂತಹ ಕ್ಷೇತ್ರಗಳಲ್ಲಿ ಎಐನ ತ್ವರಿತ ವಿಸ್ತರಣೆಯಿಂದಾಗಿ ವಿದ್ಯಾರ್ಥಿಗಳು ಅತ್ಯುತ್ತಮ ಮತ್ತು ಭವಿಷ್ಯ-ನಿರೋಧಕ ವೃತ್ತಿ ಅವಕಾಶಗಳನ್ನು ಪಡೆಯುತ್ತಾರೆ. ಬಿ.ಟೆಕ್ ಇನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ನಂತರ, ವಿದ್ಯಾರ್ಥಿಗಳು ಎಐ ಎಂಜಿನಿಯರ್, ಮೆಷಿನ್ ಲರ್ನಿಂಗ್ ಎಂಜಿನಿಯರ್, ಡೇಟಾ ಸೈಂಟಿಸ್ಟ್, ರೊಬೊಟಿಕ್ಸ್ ಎಂಜಿನಿಯರ್, ಎನ್‌ಎಲ್‌ಪಿ ಎಂಜಿನಿಯರ್, ಎಐ ಸಂಶೋಧನಾ ವಿಜ್ಞಾನಿ ಆಗಬಹುದು. ಪ್ರವೇಶ ಪ್ರಕ್ರಿಯೆ ಅರ್ಹತೆ/ಪ್ರವೇಶ ಆಧಾರಿತ ಪ್ರವೇಶ ಪರೀಕ್ಷೆಗಳು ಜೆಇಇ ಮುಖ್ಯ ಪರೀಕ್ಷೆ, ಟಿಎನ್‌ಇಎ ಕೌನ್ಸೆಲಿಂಗ್, ಟಿಎಸ್ ಇಎಎಂಸಿಇಟಿ

## ಹೈಕೋರ್ಟ್ ನಿರ್ದೇಶನ: ವೇತನ ಸಹಿತ ಮುಟ್ಟಿನ ರಜೆ ಜಾರಿಗೆ ತರಲು ಸರ್ಕಾರ ಬದ್ಧ; ಸಂತೋಷ್ ಲಾಡ್

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಹೈಕೋರ್ಟ್ ನಿರ್ದೇಶನದ ನಂತರ, ಎಲ್ಲಾ ವಲಯಗಳಲ್ಲಿ ವೇತನ ಸಹಿತ ಮುಟ್ಟಿನ ರಜೆ ನೀತಿಯನ್ನು ಸಾಧ್ಯವಾದಷ್ಟು ಬೇಗ ಕಟ್ಟುನಿಟ್ಟಾಗಿ ಜಾರಿಗೆ ತರುವುದಾಗಿ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ. ಔಪಚಾರಿಕವಾಗಿ ನಿಯಮ ಜಾರಿಗೆ ಬರುವವರೆಗೆ, ಮುಟ್ಟಿನ ರಜೆ ನೀತಿಯನ್ನು "ಕಟ್ಟುನಿಟ್ಟಾಗಿ ಮತ್ತು ನಿಷ್ಠೆಯಿಂದ" ಜಾರಿಗೆ ತರುವಂತೆ ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.**




ನಮ್ಮ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ನೀತಿಯಾದ 'ಋತುಚಕ್ರ ರಜೆ ನೀತಿ'ಗೆ ಪೂರಕವಾಗಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿರುವ ನಿರ್ದೇಶನವನ್ನು ಸ್ವಾಗತಿಸುತ್ತೇನೆ. ಋತುಚಕ್ರ ರಜೆನೀತಿಯನ್ನು ಇಡೀ ದೇಶದಲ್ಲೇ ಸಮರ್ಪಕವಾಗಿ ಹಾಗೂ ಮಾದರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇರಿಸಿದೆ. ಘನ ನ್ಯಾಯಾಲಯದ ಅಭಿಪ್ರಾಯದಂತೆ "ಮುಟ್ಟಿನ ರಜೆಯು ಮಹಿಳೆಯರ ಘನತೆ, ನ್ಯಾಯಯುತ ಮತ್ತು ಅವರ ವಾಸ್ತವಿಕ ಬದುಕಿನ ಮಾನವೀಯ ಅರಿವು" ಎಂಬುದನ್ನು ಮೂಲ ಆಶಯವಾಗಿಟ್ಟುಕೊಂಡು ಅತಿ ಶೀಘ್ರದಲ್ಲಿ ಎಲ್ಲ ವಲಯಗಳಲ್ಲೂ ಸಹ ತಿಂಗಳಿಗೆ ಒಂದರಂತೆ ಒಟ್ಟು ವರ್ಷಕ್ಕೆ 12 ವೇತನ ಸಹಿತ ಋತುಚಕ್ರ ರಜೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಸಂತೋಷ್ ಲಾಡ್ ಬರೆದುಕೊಂಡಿದ್ದಾರೆ.




## ಶಾಸಕ ಆರ್. ಬಸನಗೌಡ ತುರ್ವಿಹಾಳರಿಗೆ ಸಚಿವ ಸ್ಥಾನ ನೀಡಲು ಸಂಜಯಕುಮಾರ ಜೈನ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: 2021 ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮುಳುಗುವ ಹಡಗು ಎಂದು ಬಹಳಷ್ಟು ಜನ ಗೇಲಿ ಮಾಡಿದ್ದರು. ರಾಜ್ಯದ ಬಿಜೆಪಿಯ ಮುಂಖ್ಯ ಮಂತ್ರಿ ಯಾದಿಯಾಗಿ ಅವರ ಸಚಿವ ಸಂಪೂಟದ ಸಹುದ್ದೋಗಳು ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಯೊಂದು ಗ್ರಾಪಂಗೆ ಒಬ್ಬ ಸಚಿವರಂತೆ ಬೀಡುಬಿಟ್ಟಿದ್ದರು.**

ಆದರೆ ಮಸ್ಕಿ ಕ್ಷೇತ್ರದ ಮತದಾದರು ಕ್ಷೇತ್ರದ ರೈತರ ಮಗನೆಂದೆ ಹೆಸರಾದ ಆರ್. ಬಸನಗೌಡ ತುರ್ವಿಹಾಳರಿಗೆ ಆರ್ಶಿವಾದ ಮಾಡಿ ರಾಜ್ಯ ಹಾಗೂ ರಾಷ್ಟ್ರ ನಾಯಕರ ಕಣ್ಣು ತೆರೆಸಿದ ಮಸ್ಕಿ ವಿಧಾನಸಬಾ ಕ್ಷೇತ್ರ ಕಾಂಗ್ರೇಸ್‌ಗೆ ಪುರ್ನಜನ್ಮ ನೀಡಿದ



ಕ್ಷೇತ್ರವಾಗಿದೆ ಎಂದು ಪಟ್ಟಣದ ಕಾಂಗ್ರೇಸ್ ಮುಖಂಡ ಮಸ್ಕಿ ಗ್ರಾಮೀಣ ಪ್ರಚಾರ ಸಮಿತಿಯ ಅಧ್ಯಕ್ಷರಾದ ಸಂಜಯಕುಮಾರ ಜೈನ್ ತಿಳಿಸಿದರು.

36 ಸಾವಿರ ಅಧಿಕ ಮತಗಳ ಅಂತರದಿಂದ ಗೆದ್ದು ಆಡಳಿತ ಸರಕಾರಕ್ಕೆ ಶೇಡ್ದು ಹೋಡೆದ ರೈತ ನಾಯಕ ಆರ್. ಬಸನಗೌಡ ತುರ್ವಿಹಾಳರಾಗಿದ್ದಾರೆ. 2023 ರ ಸಾರ್ವತ್ರಿಕ ಚುನಾವಣೆಯಲ್ಲಿ ಸಹ ಮತ್ತೊಮ್ಮೆ ಭರ್ಜರಿ ಜಯ ಸಾಧಿಸುವುದರ ಮೂಲಕ ಮಸ್ಕಿ ವಿಧಾನಸಭಾಕ್ಷೇತ್ರವನ್ನು ಕಾಂಗ್ರೆಸ್ ಭದ್ರಕೋಟೆ ಎಂದು ಸಾಭಿತು ಪಡಿಸಿದ ರೈತನಾಯಕನಿಗೆ ಸಚಿವ ಸ್ಥಾನ ನೀಡಿ ಗೌರವಿಸಿವದು ಹೈಕಮಾಂಡ್ ಕರ್ತವ್ಯವಾಗಿದೆ ಎಂದು ತಿಳಿಸಿದ್ದಾರೆ.

## ಪೌರತ್ವ ಪಡೆಯಲು ಬಂಗಾಲಿಗರಿಂದ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಮುಂದೆ ಬೃಹತ್ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಉತ್ತರಾಖಂಡ ರಾಜ್ಯದ ಶುಬ್ರುತ್ ಕುಮಾರ್ ಬಿಸ್ವಾಸ್ ನೇತೃತ್ವದಲ್ಲಿ ಬಂಗಾಲಿ ಆರ್.ಎಚ್.ಕ್ಯಾಂಪ್ 3ರಲ್ಲಿ ಸಭೆ ನಡೆಸಲಾಯಿತು. ದೇಶದಾದ್ಯಂತ ಬಂಗಾಲಿ ಜನರನ್ನು ಜಾಗೃತಿಗೊಳಿಸುವ ಹಾಗೂ ಹಕ್ಕುಗಳನ್ನು ಪಡೆಯುವ ಉದ್ದೇಶದಿಂದ ಸಭೆಗಳನ್ನು ನಡೆಸಿ ನಮ್ಮ ಜನತೆಯನ್ನು ಜಾಗೃತಿಗೊಳಿಸುತ್ತಿದ್ದೇವೆ ಎಂದರು.**

ಈ ದೇಶವನ್ನು ವಿಭಜನೆ ಮಾಡು ಅಂತ ಯಾರು ಹೇಳಿಲ್ಲ. ನಾವು ಕೂಡ ಈ ದೇಶದ ನಿವಾಸಿಗಳೆ ಸ್ವಾಮಿ, ನಮಗೆ ಪೌರತ್ವ ಪಡೆಯಲು, ಮತದಾರರಾಗಿ ಹಕ್ಕು ಪಡೆಯಲು ಹಾಗೂ ಜಾತಿ ಪ್ರಮಾಣ ಪತ್ರ ಪಡೆಯಲು ಸೇರಿದಂತೆ ಇತರೆ ಹಕ್ಕು ಪಡೆಯಲು ಕೇಳಿದಾಗ ನಮ್ಮ ಪೂರ್ವಿಕರ ದಾಖಲಾತಿ ಕೇಳುತ್ತಿದ್ದೀರಿ, ಈ




ದಾಖಲಾತಿ ಕೇಳುವವರು ಯಾರು ಇದ್ದಾರೋ ಪ್ರಧಾನಿ ಮನಮೋಹನ್ ಸಿಂಗ್, ಮಾಜಿ ಅವರು ಮೊದಲು ದಾಖಲಾತಿ ಕೊಡಲಿ ಮಾಜಿ ಗೃಹ ಸಚಿವ ಲಾಲಕೃಷ್ಣ ಅಡ್ವಾಣಿ ಅವರು



ಯಾವ ದಾಖಲಾತಿ ಕೊಟ್ಟಿದ್ದಾರೆ. ಅವರಿಗೆ ಒಂದು ಕಾನೂನು? ಪ್ರಶ್ನಿಸಲು ಹಿಂಜರಿಯುವ ಜನರಿಗೆ ಮತ್ತೊಂದು ಕಾನೂನಾ ? ಈ ಭಾರತ ದೇಶದ ಸ್ವತಂತ್ರ ಹೋರಾಟಗಾರರಲ್ಲಿ ನಮ್ಮ ಬಂಗಾಲಿ ಜನರು ಇದ್ದಾರೆ.

ನಾವು ಯಾವ ಪಕ್ಷದ ವಿರುದ್ಧವು ಅಲ್ಲ, ಪರವು ಮಾತನಾಡಲು ಬಂದಿಲ್ಲ. ನಮ್ಮ ಹಕ್ಕುಗಳನ್ನು ಪಡೆಯಲು ಜನತೆಯನ್ನು ಜಾಗೃತಿಗೊಳಿಸಲು ಬಂದಿದ್ದೇವೆ, ಇನ್ನೂ ನಾವು ಪ್ರಶ್ನೆ ಮಾಡದೇ ಹೋದರೆ ಮುಂದಿನ ತಲೆಮಾರಿನ ನಮ್ಮ ಬಂಗಾಲಿ ಜನತೆ ನಮ್ಮನ್ನು ಕ್ಷಮಿಸುವುದಿಲ್ಲ. ಈ ಕಾರಣದಿಂದಾಗಿ ಇದೇ ಸೋಮವಾರ ಏ.20 ರಂದು ಜಿಲ್ಲಾಧಿಕಾರಿ ಕಚೇರಿಯ ಮುಂದೆ ಪ್ರತಿಭಟಿಸಿ ನಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗೋಣ ಎಂದು ಬಂಗಾಲಿ ನಿವಾಸಿಗರಿಗೆ ಕರೆ ಕೊಟ್ಟರು.

ಇದೇ ವೇಳೆ: ಸುನೀಲ್ ಮೇಸ್ತ್ರಿ, ಸಾಗರ್ ಮಂಡಲ್, ಸರೋಜಿತ್ ಗಾಯಲ್, ಪ್ರಣಬ್ ಬಾಲ, ಸಾಧನ್ ಸನ್, ಪ್ರದೀಪ್ ದಾಸ್, ಧರ್ಮೇಂದ್ರ ಬಿಸ್ವಾಸ್, ನಿತಾಹಿ, ಪ್ರಮೋಥ ಮೇಸ್ತ್ರಿ, ಪ್ರಫುಲ್ ಬಿಸ್ವಾಸ್, ಸಮೀರ ರಾಯ್, ಸೇರಿದಂತೆ ಬಂಗಾಲಿ ಕ್ಯಾಂಪಿನ ನೂರಾರು ಜನರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.